ಬೆಲೆ ರೂ.2.50
D.O.P - 15th of every month at Udupi Head Office

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

# ಶ್ರೀ ಶಾರದಾ

ಮಾಸಪತ್ರಿಕೆ – 15 ಸೆಪ್ಟೆಂಬರ್ 2023

॥ ಧಿಯೋ ಯೋನಃ ಪ್ರಚೋದಯಾತ್ ॥

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 0820-2958444, 8971185844
ಸಂಪುಟ-24 ಸಂಚಿಕೆ-9 ಪುಟಗಳು-10 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

## ಶೃಂಗೇರಿ ಜಗದ್ಗುರುಗಳ ಚಾತುರ್ಮಾಸದ ಭೇಟಿ

– ಕೃಷ್ಣಮೂರ್ತಿ, ಬ್ರಹ್ಮಾವರ



ಪ್ರತೀ ವರ್ಷ ಗಣೇಶ ಚತುರ್ಥಿಯ ಹಿಂದಿನ ರವಿವಾರ ಸಂಪ್ರದಾಯದಂತೆ ನಮ್ಮ ಸ್ಥಾನಿಕ ಬ್ರಾಹ್ಮಣ ಸಮಾಜದವರೆಲ್ಲಾ ಒಂದಾಗಿ ಶೃಂಗೇರಿ ಗುರುಗಳ ಸನ್ನಿಧಾನಕ್ಕೆ ತೆರಳಿ ಆಶೀರ್ವಾದಾನುಗ್ರಹ ಪಡೆಯುವುದು ವಾಡಿಕೆ. ಈ ಬಾರಿ ಗಣೇಶ ಚತುರ್ಥಿಯ ಹಿಂದಿನ ದಿನ ರವಿವಾರ ಬಂದುದರಿಂದ ಹಬ್ಬದಾಚರಣೆಯು ತಯಾರಿಗೆ ತೊಂದರೆಯಾಗಬಹುದೆಂಬ ಹಿನ್ನೆಲೆಯಲ್ಲಿ ಮನವಿಯು ಮೇರೆಗೆ ಆಗಸ್ಟ್ 13 ರವಿವಾರದಂದು ಗುರುಗಳ ಭೇಟಿಗೆ ಅಪ್ಪಣೆ ದೊರಕಿದುದು ನಮ್ಮ ಸೌಭಾಗ್ಯ. ಉಡುಪಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ವತಿಯಿಂದ ಶೃಂಗೇರಿಗೆ ಆಗಮಿಸುವ ಸುಮಾರು 130 ಆಸಕ್ತರನ್ನು ಸಂಪರ್ಕಿಸಿ, ನಿಗದಿಯಾದ ದಿನದಂದು ಬೆಳಿಗ್ಗೆ 7.30ಕ್ಕೆ ಶ್ರೀ ಶಾರದಾ ಮಂಟಪದಲ್ಲಿ ಚಾ/ಕಾಫಿ ಸೇವಿಸಿ, 1 ಖಾಸಗಿ, 2 ಸರಕಾರಿ ಬಸ್ಸುಗಳು ಹಾಗೂ 2 ಕಾರುಗಳಲ್ಲಿ ಶೃಂಗೇರಿಯು ಪ್ರವಾಸ ಪ್ರಾರಂಭವಾಯಿತು. ಖಾಸಗಿ ಬಸ್ಸು ಶೃಂಗೇರಿಗೆ ಬರುವವರನ್ನು ಮಾರ್ಗ ಮಧ್ಯದಲ್ಲಿ ಹತ್ತಿಸಿಕೊಳ್ಳುತ್ತಿದ್ದರೆ, ಹಿಂದಿನಿಂದ ಅಂಗರಕ್ಷಕರಂತೆ ಎರಡೂ ಸರಕಾರಿ ಬಸ್ಸುಗಳು ಹಿಂಬಾಲಿಸಿತು.

(4ನೇ ಪುಟಕ್ಕೆ...)

### ಜಗದ್ಗುರುಗಳ ಅನುಗ್ರಹಾಮೃತ



ಮನುಷ್ಯ ಜನ್ಮ ಶ್ರೇಷ್ಠವಾದುದು – ಪೂರ್ವ ಜನ್ಮದ ಸಂಚಿತ ಕರ್ಮದ ಬಂಧನದಿಂದ ಮುಕ್ತಿ ಪಡೆಯಲು ಸತ್ಕರ್ಮಗಳನ್ನು ರೂಢಿಸಿಕೊಳ್ಳಬೇಕು. ಅಜ್ಞಾನದಿಂದ ಜ್ಞಾನದೆಡೆಗೆ ಸಾಗಲು ಗುರುಗಳ ಮಾರ್ಗದರ್ಶನ ಬೇಕು. ಆ ಮಾರ್ಗದಿಂದ ಭಗವಂತನ ಅನುಗ್ರಹಕ್ಕೆ ಪಾತ್ರರಾಗಬೇಕು. ಜೀವನದಲ್ಲಿ ಕೆಲವೊಂದು ನಾವೆಣಿಸಿದಂತಾಯಿತು ಎಂದುಕೊಂಡರೂ ಭವದ ಘೋರ ದುರಿತಗಳಿಂದ ನಮ್ಮನ್ನು ಪಾರು ಮಾಡಲು 'ಸತ್-ಚಿತ್-ಆನಂದ' ದಿಂದ ಮಾತ್ರ ಸಾಧ್ಯ.

ಶ್ರೀಗಳು ಭಗವಂತನ ಸಾಕ್ಷಾತ್ಕಾರದ ಸಾಧನೆಯ ನಿರ್ಧಾರವನ್ನು ಅಸಡ್ಡೆ ಮಾಡಿ ಮುಂದೂಡದಿರಿ ಎಂದು ದುಂಬಿಯ ಉದಾಹರಣೆಯೊಂದಿಗೆ ಗುರುಗಳು ಸ್ಪಷ್ಟಪಡಿಸಿದರು.

ಸರೋವರದಲ್ಲಿರುವ ತಾವರೆ ಹೂವಿನ ಮೇಲೆ ಕುಳಿತಿದ್ದ ದುಂಬಿಯೊಂದು, ಸಂಜೆಯಾಗುತ್ತಲೇ ತಾವರೆ ಎಸಳುಗಳು ಮುಚ್ಚಿಕೊಳ್ಳುವಾಗ ಅಸಡ್ಡೆಯಿಂದ ಹೊರಗೆ ಬರುವುದನ್ನು ಬಿಟ್ಟು ಅದರೊಳಗೆ ಕತ್ತಲಲ್ಲಿ ಮಲಗಿ ನಿದ್ರಿಸಿತು. ರಾತ್ರಿ ಸರೋವರದ ಬಳಿ ಬಂದ ಆನೆಯೊಂದು ಸರೋವರದ ನೀರಿಗಿಳಿದು ನೀರಾಟ ಆಡುವಾಗ ಸೊಂಡಿಲಿಗೆ ಸಿಕ್ಕ ದುಂಬಿ ಅಡಗಿದ ತಾವರೆ ಬಳ್ಳಿಯನ್ನು ಕಿತ್ತು. ಎತ್ತಿ ಸರೋವರದ ದಡಕ್ಕೆ ಅಪ್ಪಳಿಸಿತು. ಅಪ್ಪಳಿಸಿದ ಬಲಕ್ಕೆ ಹೂವಿನಲ್ಲಿ ಅಡಗಿದ ದುಂಬಿ ಕೊನೆ ಉಸಿರೆಳೆಯಿತು.

ಶ್ರೀ ಶಂಕರಾಚಾರ್ಯರು ತಮ್ಮ ಸಿದ್ಧಾಂತಗಳನ್ನು ಸರಳ ಹಾಗೂ ಸ್ಪಷ್ಟವಾಗಿ ನಮಗೆ ನೀಡಿದ್ದಾರೆಂದು ಎಲ್ಲರನ್ನು ಅನುಗ್ರಹಿಸಿ ಫಲ, ಮಂತ್ರಾಕ್ಷತೆ ನೀಡಿ ಹರಸಿದರು.



## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102.

### ಆಮಂತ್ರಣ

ಮಾನ್ಯ ಸಮಾಜಬಾಂಧವರೇ,

ಸ್ವಸ್ತಿ! ಶ್ರೀ ಶೋಭಕೃತ್ ನಾಮ ಸಂವತ್ಸರದ ತುಲಾ ಮಾಸ ದಿನ ೦೭ ಸಲುವ ಆಶ್ವಯುಜ ಶುದ□೦ ಯು, ತಾ.24-10-2023ನೇ ಮಂಗಳವಾರ

**ವಿಜಯದಶಮಿ ದಿನದಂದು**

## ಶ್ರೀ ಚಂಡಿಕಾಯಾಗ ಮತ್ತು ಶ್ರೀ ಶಾರದಾ ಪೂಜಾ

ಕಾರ್ಯಕ್ರಮವು ಶ್ರೀ ಶಾರದಾ ಮಂಟಪದಲ್ಲಿ ಜರಗಲಿದೆ. ಸರ್ವರೂ ಬಂಧು-ಬಾಂಧವರೊಡಗೂಡಿ ಆಗಮಿಸಿ, ಆ ದಿನ ನಡೆಯಲಿರುವ ಎಲ್ಲಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಸಂಪನ್ನಗೊಳಿಸಬೇಕೆಂದು ಅಪೇಕ್ಷಿಸುತ್ತೇವೆ.

| ಕೆ.ಮಂಜುನಾಥ ಹೆಬ್ಬಾರ್ | ಕೆ. ಗಣೇಶ ಹೆಬ್ಬಾರ್ | ಪಿ. ಪ್ರಭಾಕರ ಭಂಡಿ |
|---|---|---|
| ಅಧ್ಯಕ್ಷರು | ಕೋಶಾಧಿಕಾರಿ | ಕಾರ್ಯದರ್ಶಿ |

ವಿ.ಸೂ : ಈ ವರ್ಷವೂ ನವರಾತ್ರಿಯಲ್ಲಿ ತಾ.15.10.2023ರಿಂದ ತಾ.23.10.2023ರ ವರೆಗೆ ಪ್ರತೀ ದಿನ ಸಂಜೆ ಶ್ರೀ ಶಾರದಾ ದೇವಸ್ಥಾನದಲ್ಲಿ ದುರ್ಗಾನಮಸ್ಕಾರ ಪೂಜೆಯನ್ನು ಏರ್ಪಡಿಸಲಾಗುವುದು. ದುರ್ಗಾನಮಸ್ಕಾರ ಸೇವೆಯ ಕರ್ತೃಗಳಾಗಲು ಬಯಸುವವರಿಗೆ ರೂ.6000 ಸೇವಾದರ ನಿಗದಿಪಡಿಸಲಾಗಿದೆ. ಆಸಕ್ತ ಭಕ್ತರು ವಿವರಗಳಿಗಾಗಿ ಕಾರ್ಯದರ್ಶಿ ಶ್ರೀ ಪ್ರಭಾಕರ ಭಂಡಿ, ಪೆರ್ಡೂರು 9449254846ರನ್ನು ಸಂಪರ್ಕಿಸಬೇಕಾಗಿ ಕೋರುತ್ತೇವೆ.

## ಶ್ರೀ ಶಾರದಾ ಮಂಟಪದಲ್ಲಿ ವರಮಹಾಲಕ್ಷ್ಮೀ ವ್ರತಾಚರಣೆ



ಶ್ರಾವಣ ಮಾಸದ ಮೊದಲ ಶುಕ್ರವಾರ – ತಾ.25.08.2023 ರಂದು ಶಾರದಾ ಕಲ್ಯಾಣ ಮಂಟಪದಲ್ಲಿ ಸಮಾಜ ಬಾಂಧವರಿಂದ ಭಕ್ತಿಪೂರ್ವಕವಾಗಿ ಶ್ರೀ ವರಮಹಾಲಕ್ಷ್ಮೀ ವ್ರತವನ್ನು ಆಚರಿಸಲಾಯಿತು. ಸಂಜೆ 5.00 ಗಂಟೆಯಿಂದ ಶ್ರೀ ಗಣೇಶ, ದೇವಿ ಹಾಗೂ ಗುರುಸ್ತುತಿಯ ಭಜನೆಗಳು ಸಮಾಜದ ಮಹಿಳೆಯರಿಂದ ನಡೆಯಿತು. ಬಳಿಕ ಸುಮಾರು 85 ಸುಹಾಸಿನಿಯರು ಪೂಜಾ ಸಂಕಲ್ಪ ಕೈಗೊಂಡರು. ಸುಮಂಗಲಿಯರು ತುಪ್ಪದ ದೀಪಗಳನ್ನು ಹಚ್ಚಿ, ಹೂವು, ಅರಿಶಿನ-ಕುಂಕುಮಗಳಿಂದ ಅರ್ಚನೆ, ಶ್ರೀ ಲಕ್ಷ್ಮೀಅಷ್ಟೋತ್ತರವನ್ನು ಪಠಿಸುತ್ತಾ ದೇವಿ ಪೂಜೆಯನ್ನು ಕೈಗೊಂಡರು. ಬಳಿಕ ಪುರೋಹಿತರಿಂದ ವರಮಹಾಲಕ್ಷ್ಮೀ ವ್ರತದ ಮಹತ್ವವನ್ನು ಆಧ್ಯಾತ್ಮಿಕ ದೃಷ್ಟಾಂತಗಳ ಸಹಿತ ವಿವರಿಸಿದರು.

ಶ್ರೀ ಪ್ರತಾಪ್ ಶರ್ಮಾ ಮತ್ತು ಶ್ರೀ ಸುಬ್ರಹ್ಮಣ್ಯ ರಾವ್ ಪುರೋಹಿತರಾಗಿದ್ದರು. ಶ್ರೀಮತಿ ರಾಜೇಶ್ವರಿ ಹಾಗೂ ಶಿವರಾಜ ರಾವ್ ದಂಪತಿಗಳು ಪೂಜಾ ಕರ್ತೃಗಳಾಗಿ ಭಾಗವಹಿಸಿ ಸಂಘಕ್ಕೆ ದೇಣಿಗೆ ನೀಡಿ ಸಹಕರಿಸಿದರು. ಸುಮಾರು 200ರಷ್ಟು ಸಮಾಜ ಬಾಂಧವರು ಪ್ರಸಾದ, ಫಲಹಾರಗಳನ್ನು ಸ್ವೀಕರಿಸಿದರು.




ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು ಉಡುಪಿ – 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಸೆಪ್ಟೆಂಬರ್ 5, ಶಿಕ್ಷಕರ ದಿನಾಚರಣೆ

ವೈ.ಮೋಹನ ರಾವ್

**ಸಂಪಾದಕ ಮಂಡಳಿ**

ಶ್ರೀ ಯು. ಅರವಿಂದ ಕುಮಾರ್
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಮಧುಸೂಧನ ರಾವ್ ಕುಂಜಾರುಗಿರಿ
ಡಾ। ಶ್ರೀಮತಿ ವಿಜಯ ರಾವ್ ವೈ.ಬಿ.
★★★★ ★★★★

ಸಲಹೆಗಾರರು :
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ
ಶ್ರೀ ಕೆ. ವೇಣುಗೋಪಾಲರಾವ್, ಅಂಬಲಪಾಡಿ





1962 ರಿಂದ ಭಾರತಾದ್ಯಂತ ಸೆಪ್ಟೆಂಬರ್ 5ನ್ನು 'ಶಿಕ್ಷಕರ ದಿನ'ವನ್ನಾಗಿ ಆಚರಿಸಲ್ಪಡುತ್ತದೆ. ಡಾ। ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನವನ್ನು 'ಶಿಕ್ಷಕರ ದಿನ' ವನ್ನಾಗಿ ಆಚರಿಸುತ್ತಾರೆ. ಸ್ವತಃ ಉತ್ತಮ ಶಿಕ್ಷಕರಾಗಿರುವ, ರಾಜಕೀಯ ಮುತ್ಸದ್ದಿಯಾಗಿರುವ ಡಾ. ರಾಧಾಕೃಷ್ಣನ್‌ರವರೇ ಹೇಳಿರುವಂತೆ-ನನ್ನ ಜನ್ಮದಿನದ ಆಚರಣೆಯನ್ನು ಶಿಕ್ಷಕರಿಗಾಗಿ ಅರ್ಪಿಸುತ್ತೇನೆ. ಆ ದಿನವನ್ನು ಶಿಕ್ಷಕರ ದಿನವನ್ನಾಗಿ ಆಚರಿಸಬೇಕು.

1888 ಸೆಪ್ಟೆಂಬರ್ 5 ರಂದು ವೀರಸ್ವಾಮಯ್ಯ ಮತ್ತು ಸೀತಮ್ಮ ಎಂಬ ದಂಪತಿಗಳ ಮಗನಾಗಿ ರಾಧಾಕೃಷ್ಣನ್ ಜನಿಸಿದ್ದರು. ಈ ವಿಶ್ವಮಾನ್ಯ ವ್ಯಕ್ತಿಯ ಜನ್ಮಸ್ಥಳ ಆಂಧ್ರಪ್ರದೇಶದ ತಿರುತ್ತಣಿ. ಅವರು ಲೂಥರನ್ ಮಿಷನ್ ಹೈಸ್ಕೂಲ್‌ನಲ್ಲಿ ಹೈಸ್ಕೂಲ್ ವಿದ್ಯಾಭ್ಯಾಸ ಮಾಡಿದರು. ಅವರು ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ಬಿ.ಎ. ಪದವಿಯನ್ನು ಪಡೆದರು. ಅನಂತರ ಬ್ರಿಟನಿಗೆ ಅವರು ತೆರಳಿದರು. ಅಲ್ಲಿ ಆಕ್ಸ್‌ಫರ್ಡ್‌ನಲ್ಲಿ ಕೆಲವು ಕಾಲ ಪ್ರಾಧ್ಯಾಪಕ ಹುದ್ದೆಯನ್ನು ನಿರ್ವಹಿಸಿದರು. ಭಾರತಕ್ಕೆ ಮರಳಿದ ಮೇಲೆಯೂ ಕೆಲವು ವರ್ಷಗಳ ಕಾಲ ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿ ತಮ್ಮ ಶಿಕ್ಷಕ ವೃತ್ತಿಯನ್ನು ಮುಂದುವರಿಸಿದರು.

ಓದು ಎಂದರೆ ಡಾ. ರಾಧಾಕೃಷ್ಣನ್ ಅವರಿಗೆ ಎಲ್ಲಿಲ್ಲದ ಪ್ರೀತಿ ಆದರ. ಸಾಹಿತ್ಯ, ಇತಿಹಾಸ, ಕಾವ್ಯ, ಕಾದಂಬರಿ, ನಾಟಕ ಎಲ್ಲವೂ ಅವರಿಗೆ ಪ್ರಿಯವಾದವುಗಳು. ಸಂಸ್ಕೃತ ಮತ್ತು ಹಿಂದಿಯನ್ನು ಕಲಿತರು. ವೇದೋಪನಿಷತ್ತನ್ನು ಅಭ್ಯಸಿಸಿದರು. ಭಾರತದ ತತ್ವಶಾಸ್ತ್ರದ ಹಿರಿಮೆಯನ್ನು ಮನಗಂಡರು. ಡಾ. ರಾಧಾಕೃಷ್ಣನ್ ಅವರು ಅಗಾಧ ಸ್ಮರಣಶಕ್ತಿಯನ್ನು ಹೊಂದಿದ್ದರು. ಒಮ್ಮೆ ಓದಿದ ಪುಟಗಳನ್ನು ಅದರಂತೆಯೇ ಹೇಳುತ್ತಿದ್ದರು. ಹೇಳಿದ್ದನ್ನು ಹಾಗೆಯೇ ಬರೆಯುತ್ತಿದ್ದರು. ಅವರ ಮಾತು ಕಾವ್ಯಮಯವಾಗಿತ್ತು. ಅವರ ನಡೆ ಸರಳವಾಗಿತ್ತು. ಅವರು ಗುಣದಲ್ಲಿ ಸಾತ್ವಿಕರಾಗಿದ್ದರು. ಅವರ ಅಚ್ಚುಮೆಚ್ಚಿನ ಹವ್ಯಾಸ ಎಂದರೆ ಬರವಣಿಗೆ.

ಡಾ. ರಾಧಾಕೃಷ್ಣನ್ ಅವರ ಮೊದಲ ಪುಸ್ತಕ 'ರವೀಂದ್ರನಾಥ ಠಾಗೂರರ ಜೀವನ ದೃಷ್ಟಿ'. ಈ ಕೃತಿಯ ಪ್ರಕಟಣೆಯಿಂದ ಅವರ ಜೀವನಕ್ಕೆ ಹೊಸ ತಿರುವು ಸಿಕ್ಕಿತು. ಭಾರತೀಯ ತತ್ವಶಾಸ್ತ್ರದ ಬಗ್ಗೆ ಹಲವಾರು ಗ್ರಂಥಗಳನ್ನು ಬರೆದಿದ್ದಾರೆ. ಅವರು 'ಭಾರತೀಯ ದರ್ಶನ' ಎಂಬ ಶೀರ್ಷಿಕೆಯಡಿ ಎರಡು ದೊಡ್ಡ ಗ್ರಂಥಗಳನ್ನು

(3ನೇ ಪುಟಕ್ಕೆ...)



ಉಡುಪಿಯ ಶ್ರೀಮತಿ ಪೂರ್ಣಿಮಾ ಪ್ರಫುಲ್ಲಚಂದ್ರ ಇವರು ತಮ್ಮ ಪತಿಯ ಭಾವಚಿತ್ರವನ್ನು ಮಂಟಪದಲ್ಲಿ ಇರಿಸುವ ಬಗ್ಗೆ ರೂ.1,00,000 ದೇಣಿಗೆ ನೀಡಿ ಸಹಕರಿಸಿರುತ್ತಾರೆ. ಸಂಘದ ಮಾಜಿ ಅಧ್ಯಕ್ಷರಾಗಿದ್ದ ದಿ.ಪ್ರಫುಲ್ಲಚಂದ್ರ ಹಾಗೂ ಅವರ ಮನೆಯವರ ಸಂಘದ ಬಗ್ಗೆ ಕಾಳಜಿಯನ್ನು ಅಧ್ಯಕ್ಷರಾದ ಮಂಜುನಾಥ್ ಹೆಬ್ಬಾರ್ ಈ ಸಂದರ್ಭದಲ್ಲಿ ಸ್ಮರಿಸಿದರು.

## ಸೌಮ್ಯಲತಾ ನವೀನ್ ಮಂಡಿಸಿದ ಪ್ರಬಂಧಕ್ಕೆ ಪಿ.ಹೆಚ್.ಡಿ.



ಬೆಂಗಳೂರಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಸೌಮ್ಯಲತಾ ನವೀನ್ ಅವರು ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್ ವಿಭಾಗದಲ್ಲಿ ಡಾ। ಮಂಜುನಾಥ್ ಕೌಂಟೆ ಮಾರ್ಗದರ್ಶನದಲ್ಲಿ ಮಂಡಿಸಿದ ಪ್ರಬಂಧಕ್ಕೆ ರೇವಾ ವಿಶ್ವವಿದ್ಯಾಲಯ, ಬೆಂಗಳೂರು ಪಿ.ಹೆಚ್.ಡಿ. ಪದವಿಯನ್ನು ಪ್ರಧಾನ ಮಾಡಿರುತ್ತದೆ. ಇವರು ಬೆಂಗಳೂರಿನಲ್ಲಿರುವ ನವೀನರವರ ಪತ್ನಿ ಮತ್ತು ಉಪ್ಪುಂದ ಮನೋಹರ ರಾವ್ ಮತ್ತು ಗಾಯತ್ರಿಯರ ಸೊಸೆ ಹಾಗೂ ಅಳದಂಗಡಿ ಹೊಸಪಟ್ಣ ಹೆಚ್.ಎಲ್. ರಾವ್ ಮತ್ತು ಕುಸುಮರವರ ಪುತ್ರಿ.

## ಚಂದ್ರಯಾನ 3ರಲ್ಲಿ ಶ್ರೀಮತಿ ಉಷಾ ದಿನೇಶ್ ಶಾಸ್ತ್ರಿ



ಚಂದ್ರಯಾನ 3 ರ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡಿರುವ ಮತ್ತೊಂದು ಸ್ಥಾನಿಕ ಎಂದರೆ 2022 ರಲ್ಲಿ ನಿವೃತ್ತರಾದ ಇಸ್ರೋ ವಿಜ್ಞಾನಿ ಶ್ರೀಮತಿ ಉಷಾ ದಿನೇಶ್ ಶಾಸ್ತ್ರಿ. ಅವರು ಥರ್ಮಲ್ ಟೆಸ್ಟಿಂಗ್ ವಿಭಾಗದ ಮುಖ್ಯಸ್ಥರಾಗಿದ್ದರು ಮತ್ತು ಎಲ್ಲಾ ಬಾಹ್ಯಾಕಾಶ ನೌಕೆಗಳ ಉಷ್ಣ ನಿರ್ವಹಣೆ ಮತ್ತು ನಿಯಂತ್ರಣದ ಜವಾಬ್ದಾರಿಯನ್ನು ಹೊಂದಿದ್ದರು. ಚಂದ್ರಯಾನ 3 ರ ಪ್ರೊಪಲ್ಷನ್ ಮಾಡ್ಯೂಲ್, ಲ್ಯಾಂಡರ್ ಮತ್ತು ರೋವರ್. ಮುಂತಾದ ಎಲ್ಲಾ ಮಾಡ್ಯೂಲ್‌ಗಳ ಎಲ್ಲಾ ಉಪವ್ಯವಸ್ಥೆಗಳ ಕಾರ್ಯಕ್ಷಮತೆಯನ್ನು ಪರಿಶೀಲಿಸಿದ ಮತ್ತು ಮೌಲ್ಯೀಕರಿಸಿದ ತಂಡದಲ್ಲಿ ಇವರು ಒಬ್ಬರಾಗಿದ್ದರು.

ಅವರು ಶ್ರೀ ಎಲ್ಲೂರು ಉಮೇಶ್ ರಾವ್ (ನಿವೃತ್ತ ಮುಖ್ಯ ಅಭಿಯಂತರರು) ಮತ್ತು ಶ್ರೀಮತಿ ಕಸ್ತೂರಿಯವರ ಪುತ್ರಿ ಮತ್ತು ನಮ್ಮ ಸಮಾಜಕ್ಕೆ ಹೆಮ್ಮೆ ತಂದಿದ್ದಾರೆ.



ಹಿಂದೂ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸುರೇಶ್ ಕುತ್ಪಾಡಿ ಮುಖ್ಯ ಅತಿಥಿಯಾಗಿ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಪಾಲ್ಗೊಂಡಿದ್ದರು.



Dr. Sanath S. Rao
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

JALAJA SKIN CLINIC
1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.

ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
"ಗೃಹ ಸಾಲ"
ಸಂಘದ ಪ್ರಾಥಮಿಕ ಸದಸ್ಯರಿಗೆ 10.50%
(ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10.5% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 15% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 12% |

ಆಭರಣ ಸಾಲಕ್ಕೆ ಯಾವುದೇ ಸೇವಾ ಶುಲ್ಕ, ತೆರಿಗೆ ಇರುವುದಿಲ್ಲ.

ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | :5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷದಿಂದ 3 ವರ್ಷದ ತನಕ | :8.5% |
| 3 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9% | | |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2016-17ರಿಂದ 2021-22ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ
ಪ್ರಧಾನ ಕಛೇರಿ (☎ 2522408) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114) ಬ್ರಹ್ಮಾವರ ಶಾಖೆ (☎ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ

GST : 29AKMPN4985H1ZD
ಶ್ರೀ ಕೃಷ್ಣ ಎಲೆಕ್ಟ್ರಾನಿಕ್ಸ್ & ಎಲೆಕ್ಟ್ರಿಕಲ್ಸ್
Mob. 9448953022
SHREE KRISHNA
ELECCTRONICS & ELECTRICALS
Sri Balaji Complex, Shop No-G-7,
Near KSRTC Bus Stand,
Udupi - 576101.
City Towers, Service Bus Stand,
Near Rao and Rao Circle, State Bank,
Mangalore - 575001
Branch at Mahalaxmi Prabha Complex, Market Road, Opp Tajmahal Hotel, Karkala

## ಸೆಪ್ಟೆಂಬರ್ 5, ಶಿಕ್ಷಕರ ದಿನಾಚರಣೆ

■...2ನೇ ಪುಟದಿಂದ

ಬರೆದಿದ್ದಾರೆ. ಅವರು 'ಭಗವದ್ಗೀತೆ'ಯ ಮೇಲೆ ಅದ್ಭುತವಾದ, ಸುಂದರವಾದ ಮತ್ತು ಮಾರ್ಮಿಕವಾದ ವ್ಯಾಖ್ಯಾನವನ್ನು ಮಾಡಿದ್ದಾರೆ.

1949 ರಲ್ಲಿ ಭಾರತ ಸರಕಾರ ರಷ್ಯಾ ದೇಶಕ್ಕೆ ಡಾ. ರಾಧಾಕೃಷ್ಣನ್ ಅವರನ್ನು ಪ್ರಥಮ ರಾಯಭಾರಿಯಾಗಿ ನೇಮಿಸಿತು. ರಷ್ಯಾದ ಸ್ಟ್ಯಾಲಿನ್ ರವರನ್ನು ಒಮ್ಮೆ ಭೇಟಿಯಾದಾಗ ಅವರು ನುಡಿದಿದ್ದರು. 'ನಮ್ಮ ದೇಶದಲ್ಲಿ ಒಬ್ಬ ಚಕ್ರವರ್ತಿ ಇದ್ದ. ರಕ್ತಪಾತದಿಂದ ಕೂಡಿದ ಯುದ್ಧ ಮಾಡಿದ. ಅವನು ಯುದ್ಧ ಗೆದ್ದ. ಆ ಮೇಲೆ ಯುದ್ಧ ಬಿಟ್ಟು ಸನ್ಯಾಸಿಯಾದ. ಅಹಿಂಸೆಯ ಬೋಧಕನಾದ. ಶಕ್ತಿ ಸಾಹಸಗಳಿಂದ ಕ್ರಾಂತಿಯ ಮೂಲಕ ಅಧಿಕಾರಕ್ಕೆ ಏರಿರುವ ನೀವು ಮುಂದೆ ಏನಾಗುತ್ತೀರೋ ಯಾರು ಬಲ್ಲರು'. ಅವರ ಮಾತು ಸ್ಟ್ಯಾಲಿನ್‌ಗೆ ಹಿಡಿಸಿತು.

ಡಾ. ರಾಧಾಕೃಷ್ಣನ್ ರವರು 1952ರಲ್ಲಿ ಭಾರತದ ಉಪರಾಷ್ಟ್ರಪತಿಯಾದರು. 1962 ರಲ್ಲಿ ರಾಷ್ಟ್ರಪತಿಯಾದರು. ರಾಷ್ಟ್ರಪತಿಯಾಗಿ ಡಾ. ರಾಧಾಕೃಷ್ಣನ್ ಅವರು ಆಕಾಶವಾಣಿಯ ಮೂಲಕವಾಗಲಿ, ಸಾರ್ವಜನಿಕ ವೇದಿಕೆಯ ಮೂಲಕವಾಗಲಿ ಭಾಷಣ ಮಾಡುವಾಗಲೆಲ್ಲ ಶ್ರೋತೃಗಳು ಮಂತ್ರಮುಗ್ಧವಾಗುತ್ತಿದ್ದರು. ಅವರ ಧ್ವನಿಯಲ್ಲಿ ಅಂತಹ ಗಾಂಭೀರ್ಯ. ಅವರ ವಿವೇಚನೆಯಲ್ಲಿ ಅಂತಹ ಪಾಂಡಿತ್ಯ. ಅವರ ವಾಗ್‌ಶೈಲಿಯಲ್ಲಿ ಅಂತಹ ವಿಚಾರ ಪ್ರೌಢಿಮೆ. ವೇದೋಪನಿಷತ್ತಿನಿಂದ ವಿಷಯಗಳನ್ನು ಕಂಠಪಾಠದಂತೆ ಅವರು ಉದಾಹರಿಸುತ್ತಿದ್ದರು. ಭಗವದ್ಗೀತೆಯಂತು ಅವರ ನಾಲಿಗೆಯಲ್ಲಿ ನಿರಾಯಾಸವಾಗಿ ನಲಿದಾಡುತ್ತಿತ್ತು. ಭಾರತ ಕಂಡ ಕೆಲವು ಶ್ರೇಷ್ಠ ರಾಷ್ಟ್ರಪತಿಗಳಲ್ಲಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರವರು ಒಬ್ಬರು. ಅವರು ಸರಳ ಸಜ್ಜನಿಕೆಯ ವ್ಯಕ್ತಿ. ಮಲ್ಲಿನ ದೋತರವುಟ್ಟು, ರೇಷ್ಮೆಯ ನಿಲುವಂಗಿ ತೊಟ್ಟು, ತಲೆಯ ಮೇಲೆ ರುಮಾಲನ್ನು ಇಟ್ಟು ಧರಿಸಿದ ಅವರನ್ನು ಕಂಡ ಎಲ್ಲರೂ ಅವರ ವ್ಯಕ್ತಿತ್ವಕ್ಕೆ ಆಕರ್ಷಿತರಾಗಿದ್ದರು.

ಗುರುವಿನ ಮಹತ್ವವನ್ನು ಯಾರೂ ಯಾವ ಕಾಲಕ್ಕೂ ಕಡಿಮೆ ಮಾಡಲು ಸಾಧ್ಯವಾಗದು, ಸಾಧ್ಯವೂ ಅಲ್ಲ. "ಗುರುಬ್ರಹ್ಮ ಗುರುವಿಷ್ಣುಃ ಗುರುರ್ದೇವೋ ಮಹೇಶ್ವರಃ ಗುರುಃ ಸಾಕ್ಷಾತ್ ಪರಬ್ರಹ್ಮಃ ತಸ್ಮೈ ಶ್ರೀಗುರುವೇ ನಮಃ" ಎಂದು ಪ್ರಾಚೀನ ಮನೋಭಾವನೆಯಲ್ಲಿ ಗುರು ಮಹಿಮೆಯನ್ನು ಕೊಂಡಾಡಿದ್ದುಂಟು. ದಾಸ ಶ್ರೇಷ್ಠರಾದ ಪುರಂದರದಾಸರು ಹೇಳಿದ್ದನ್ನು ಕೇಳಿಲ್ಲವೇ? ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ. ಕಸೂರಿಸಿದ್ಧನೆಂಬ ಕವಿ ಬರೆದ ಕಾವ್ಯದಲ್ಲಿ ಗುರುವಿನ ಮಹಾತ್ಮೆ ಸ್ಪಷ್ಟವಾಗುತ್ತದೆ.

ಹರಮುನಿದರೆ ಗುರುಕಾಯುವನು
ಧರೆಯೊಳು ಗುರು ಮುನಿದರೆ ಕಾವರಿಲ್ಲ
ಗುರುವಿನಿಂದಲಿ ವೆಗ್ಗಳ ದೈವವಿಲ್ಲ.

ವಿದ್ಯಾತುರಾಣಾಂ ನಸುಖಂ ನಾನಿದ್ರಾ. ವಿದ್ಯೆಯ ಮೋಹವಿರುವವರಿಗೆ ದೇಹಸುಖದ ಚಿಂತೆ ಇರಬಾರದು. ಅವನು ನಿದ್ದೆಯ ಬಗ್ಗೆಯೂ ಚಿಂತಿಸಬಾರದು. ಹೀಗೆ ಶಿಷ್ಯ ವರ್ಗ ಸಹಕರಿಸಿದರೆ ಗುರುವಿನ ದಕ್ಷತೆಯಿಂದ ಶ್ರೇಯಸ್ಸು ಖಂಡಿತ ದೊರಕುವುದು.

ಇತಿಹಾಸ ಪುರಾಣದ ಕಥೆಗಳಲ್ಲಿಯೂ ಗುರುವಿನ ಬಗ್ಗೆ ಒಂದು ವಿಶಿಷ್ಟ ಸ್ಥಾನವನ್ನು ನೀಡಿ ಗೌರವಿಸಲಾಗಿದೆ. ಪಾಂಡವರಿಗೆ ಮತ್ತು ಕೌರವರಿಗೆ ದ್ರೋಣಾಚಾರ್ಯರು ಗುರುವಾಗಿ ವಿದ್ಯೆಯನ್ನು ಕಲಿಸಿದರು. ಕೇವಲ ಸ್ಫೂರ್ತಿಯ ಸಂಕೇತವಾಗಿ ಏಕಲವ್ಯನಿಗೂ ದ್ರೋಣಾಚಾರ್ಯರು ಗುರುವೇ ಆಗಿದ್ದಾರೆ. ಅರ್ಜುನನಿಗೆ ಸರಿಸಮಾನನಾದ ಏಕಲವ್ಯ ಕೇವಲ ಗುರುಭಕ್ತಿಯಿಂದ ತನ್ನ ಹೆಬ್ಬೆರಳನ್ನು ಕತ್ತರಿಸಿಕೊಟ್ಟ. ತಾನು ಕಲಿತ ವಿದ್ಯೆಯನ್ನೇ ಧಾರೆ ಎರೆದು ಬಿಟ್ಟ.

ಗುರುಭಕ್ತನೆಂಬ ರಾಜನಿದ್ದ. ಅವನ ಒಂದು ದೌರ್ಬಲ್ಯವೆಂದರೆ ಅವನ ಯೌವ್ವನದ ಚಪಲತೆ. ಒಮ್ಮೆ ಅವನು ತನ್ನ ಪಟ್ಟಣದಲ್ಲಿ ತಿರುಗುತ್ತಿದ್ದಾಗ ಪ್ರೌಢಾವತಿ ಎಂಬ ಚೆಲುವೆಯಲ್ಲಿ ಮೋಹಗೊಂಡನು. ಆಕೆಯೋ ಒಪ್ಪಲಿಲ್ಲ. ಸ್ತ್ರೀಯರ ಬೋಧನೆಯಿಂದಲೇ ಸ್ತ್ರೀ ಮೋಹವನ್ನು ಬಿಟ್ಟು ಉದ್ಧಾರವಾದವರ ಕಥೆಗಳನ್ನು ಆಕೆ ಅವನಿಗೆ ನಿವೇದಿಸಿದಳು. ಆದರೂ ಅವನು ಒಪ್ಪಲಿಲ್ಲ. ಅವನನ್ನು ತಡೆಯಲಾಗಲಿಲ್ಲ. ನನ್ನೊಡನೆ ಬಾ ಎಂದು ಅವನು ಅವಳ ಸೀರೆಯ ಸೆರಗನ್ನು ಹಿಡಿದನು. ಆಗ ಆಕೆ ನಾನು....ನಿನ್ನ ಗುರುವಿನ ಪತ್ನಿ ಎಂದಳು. ಆಗ ತನ್ನ ತಪ್ಪಿನ ಅರಿವಾಯಿತು ಗುರುಭಕ್ತನಿಗೆ. ಅವನು ಅಲ್ಲಿಂದ ತೆರಳಿದನು. ಮನಸ್ಸು ವಿಲವಿಲನೆ ಒದ್ದಾಡಿ ಕಲ್ಲುಕಲ್ಲುಗಳೊಡನೆ, ಗಿಡಗಿಡಗಳೊಂದಿಗೆ, ಮರಮರಗಳೊಂದಿಗೆ ತನ್ನ ಅಪರಾಧಕ್ಕೆ ಮರುಗಿ ಪರಮಾರ್ಜನೆಯ ಮಾತುಗಳನ್ನು ನುಡಿದನು. ಗುರುಪತ್ನಿಯ ಮನೆಗೆ ಹೋಗುವಂತೆ ಮಾಡಿದ ತನ್ನ ಕಾಲುಗಳನ್ನೇ ಕತ್ತರಿಸಿಕೊಂಡನು. ಅವಳನ್ನು ಬಯಸಿ ನೋಡಿದ ತನ್ನ ಕಣ್ಣುಗಳನ್ನೇ ಕಿತ್ತುಕೊಂಡನು. ಅವಳ ಸೆರಗನ್ನು ಹಿಡಿದ ತನ್ನ ಕೈಯನ್ನು ಕಡಿದು ಬಿಟ್ಟನು. ಇನ್ನೊಂದು ಕೈಯಲ್ಲಿ ಕತ್ತಿ ಹಿಡಿದು ತನ್ನ ಕತ್ತನ್ನೇ ಕಡಿಯಲು ಸಿದ್ಧನಾದನು. ಆಗ ಶಿವನು ಕರುಣಿಸಿ ಗುರುಭಕ್ತನಿಗೆ ಸದ್ಗತಿಯನ್ನಿತ್ತನು. ಇಂದಿನ ಹಲವು ಶಿಷ್ಯರ ಗುರುದ್ರೋಹಕ್ಕೆ ಬೇಕು ಇಂತಹ ಗುರುಭಕ್ತನ ಕಥೆ. ಏಕಲವ್ಯ, ಉಪಮನ್ಯು, ಅರ್ಜುನನ ಕಥೆ, ಪಂಚತಂತ್ರ ಕಥೆ-ಇವುಗಳದ್ದೇ ಪುಸ್ತಕದಲ್ಲಿ ಪಠ್ಯವಾಗಬೇಕು.

ಡಾ. ರಾಧಾಕೃಷ್ಣನ್‌ರಂತಹ ಮಹಾಮಹಿಮರೊಬ್ಬರ ಜನ್ಮದಿನವನ್ನು ಶಿಕ್ಷಕರ ದಿನವೆಂದು ಆಚರಿಸಲ್ಪಡುತ್ತಿರುವುದು ನಮ್ಮ ದೇಶದ ಎಲ್ಲ ಶಿಕ್ಷಕರಿಗೆ ಒಂದು ಹೆಮ್ಮೆಯ ವಿಷಯವಾಗಿದೆ. ನಾವೆಲ್ಲರೂ ಡಾ. ರಾಧಾಕೃಷ್ಣನ್‌ರವರ ವ್ಯಕ್ತಿತ್ವದಂತೆ ಕಂಡ ಕೆಲವು ಗುಣಗಳನ್ನಾದರೂ ಮೈಗೂಡಿಸಿ ಕೊಂಡರೆ ನಾವು ಯೋಗ್ಯ ಶಿಕ್ಷಕರಾಗುವ ಯೋಗ ಪಡೆಯಬಹುದೇನೋ. ಆದ್ದರಿಂದ ಡಾ. ರಾಧಾಕೃಷ್ಣನ್ ಅವರಿಗೆ ಗೌರವ ಪೂರ್ವಕವಾದ ನಮಸ್ಕಾರಗಳು.

## ಶ್ರೀ ಎಸ್ ಮೂರ್ತಿ ರಾವ್ : ಆದರ್ಶ ಶಿಕ್ಷಕ ಪ್ರಶಸ್ತಿಗೆ ಆಯ್ಕೆ



ಬಿ.ಎಂ.ಎಂ. ಪ್ರೌಢಶಾಲೆ ಕೂರಾಡಿಯ ಮುಖ್ಯೋಪಾಧ್ಯಾಯರಾದ ಶ್ರೀ ಎಸ್. ಮೂರ್ತಿ ರಾವ್ ಪ್ರಸ್ತುತ ಸಾಲಿನಲ್ಲಿ ಉಡುಪಿ ಆದರ್ಶ ಆಸ್ಪತ್ರೆಯವರು ಕೊಡಮಾಡುವ ಪ್ರತಿಷ್ಠಿತ ಆದರ್ಶ ಶಿಕ್ಷಕ ಪ್ರಶಸ್ತಿಗೆ ಆಯ್ಕೆಯಾಗಿರುತ್ತಾರೆ. ಶ್ರೇಷ್ಠ ವಿಜ್ಞಾನ ಶಿಕ್ಷಕ, ಏರು ಧ್ವನಿಯಲ್ಲಿ ಅರ್ಥವತ್ತಾಗಿ ವಿಧ್ಯಾರ್ಥಿಗಳಿಗೆ ಕಠಿಣ ವಿಷಯವನ್ನು ಸರಳವಾಗಿ ಬೋಧಿಸುವ ಶೈಲಿ ಅವರಿಗೆ ಕರಗತವಾಗಿದೆ. ಅದೆಷ್ಟೋ ವಿಧ್ಯಾರ್ಥಿಗಳಲ್ಲಿ ವಿಜ್ಞಾನದಲ್ಲಿ ಆಸಕ್ತಿ ಉದ್ದೀಪನಗೊಳಿಸಿ ಉನ್ನತ ಶಿಕ್ಷಣದಲ್ಲಿ ವಿಜ್ಞಾನ ವಿಷಯವನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಪ್ರೇರಣಾ ಶಕ್ತಿಯಾಗಿದ್ದಾರೆ. ಉತ್ತಮ ಶಿಕ್ಷಕರಾಗಿದ್ದರು. ಯಾವುದೇ ಪ್ರಶಸ್ತಿಗೆ ಅರ್ಜಿ ಸಲ್ಲಿಸುವ ಜಾಯಮಾನದ ವ್ಯಕ್ತಿಯಾಗಿರದೆ ಸರಳತೆ ರೂಢಿಸಿಕೊಂಡ ಸಜ್ಜನ ಶಿಕ್ಷಕ. ಮುಖ್ಯೋಪಾಧ್ಯಾಯ ಹುದ್ದೆಗೆ ಭಡ್ತಿ ಹೊಂದಿದಾಗ ವಿಧ್ಯಾರ್ಥಿಗಳ ಕೊರತೆಯನ್ನು ಹಣ ಖರ್ಚು ಮಾಡಿ ಬಿಜಾಪುರದಿಂದ ಕರೆತಂದು ನಿಟ್ಟುಸಿರು ಬಿಡುವ ಹೊತ್ತಿಗೆ ಪಾಠ ಮಾಡಲು ಶಿಕ್ಷಕರ ಕೊರತೆ. ಕೈಗೆ ಬರುವ ತಿಂಗಳ ಸಂಬಳ ಶಾಲಾ ನಿರ್ವಹಣೆಗೆ ಹೊಂದಾಣಿಕೆ ಯಾಗುತ್ತಿದ್ದರೂ ಧೃತಿಗೆಡದೇ ಮುನ್ನುಗ್ಗುತ್ತಿರುವ ವಿಧ್ಯಾರ್ಥಿಗಳ ಮೆಚ್ಚಿನ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಮುಖ್ಯೋಪಾಧ್ಯಾಯರು(ಮೂರ್ತಿಮಾಸ್ತ್ರ) ಆದರ್ಶ ಶಿಕ್ಷಕ ಪ್ರಶಸ್ತಿ ಪುರಸ್ಕೃತ ರಾಗಿರುವುದು ನಮಗೆ ಹೆಮ್ಮೆ. ನಾವೆಲ್ಲರೂ ತಮ್ಮ ಸಹೋದ್ಯೋಗಿ ಎಂದು ಹೇಳಿಕೊಳ್ಳಲು ಹೆಮ್ಮೆ ಎನಿಸುತ್ತದೆ. ತಮಗೆ ಹೃದಯ ತುಂಬಿದ ಅಭಿನಂದನೆಗಳು.

## "ಶಿವಸದನ" ಹಿರಿಯ ನಾಗರಿಕರ ವಸತಿ ನಿಲಯಕ್ಕೆ ದೇಣಿಗೆ



ಅಲೆವೂರು ಶ್ರೀ ಬಾಬು ರಾವ್ ಮತ್ತು ಶ್ರೀಮತಿ ಚಂದ್ರಮ್ಮ ಸ್ಮರಣಾರ್ಥ ಅವರ ಮಕ್ಕಳು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ "ಶಿವಸದನ" ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ.1,00,000/- (ರೂ. ಒಂದು ಲಕ್ಷ) ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಅಲೆವೂರು ಶ್ರೀ ಪ್ರಭಾಕರ್ ರಾವ್, ಶ್ರೀಮತಿ ವಿನುತಾ ಪಿ.ರಾವ್, ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ ರಾವ್ ಉಪಸ್ಥಿತರಿದ್ದರು.



ಬೆಂಗಳೂರಿನ ದಿ| ಶ್ರೀ ಬಾಲಕೃಷ್ಣರವರ ಸ್ಮರಣಾರ್ಥ ಅವರ ಧರ್ಮಪತ್ನಿ ಶ್ರೀಮತಿ ಸಾವಿತ್ರಿ, ಪುತ್ರ ಕೊಡವೂರು ಶ್ರೀ ರಾಜೇಶ, ಸೊಸೆ ಶ್ರೀಮತಿ ಉಷಾ, ಮಗಳು ಶ್ರೀಮತಿ ಸವಿತಾ, ಅಳಿಯ ಶ್ರೀ ರಾಜೇಶ್, ಸಹೋದರ ಶ್ರೀ ಗಂಗಾಧರ್ ಮತ್ತು ಕುಟುಂಬದವರು ಜತೆಗೂಡಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ "ಶಿವಸದನ" ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ.1,00,000/- (ರೂ. ಒಂದು ಲಕ್ಷ) ದೇಣಿಗೆಯನ್ನು ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭ ಶ್ರೀ ಸುಬ್ರಹ್ಮಣ್ಯ ಸಭಾ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಉಪಸ್ಥಿತರಿದ್ದರು.

## ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ| ಅಂಬಲಪಾಡಿ ಕೃಷ್ಣರಾವ್, ಡಾ| ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ| ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ| ಡಾ| ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್ ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ| ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ| ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ| ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಎ. ರಾಘವೇಂದ್ರ ರಾವ್ ಮೈಸೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್ ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ| ಲೋಕೇಶ್‌ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ| ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕ ಕೃಷ್ಣರಾವ್ ದೊಡ್ಡಣಗುಡ್ಡೆ, ಶ್ರೀ ಅಶೋಕ್ ತಂತ್ರಾಡಿ ಬೆಂಗಳೂರು, ಶ್ರೀಮತಿ ದೀಪಾಲಿ ಅಶೋಕ್ ಬೆಂಗಳೂರು, ಶ್ರೀ ತಂತ್ರಾಡಿ ಶಿವರಾಮ ಶ್ಯಾನುಭಾಗ್, ಶ್ರೀಮತಿ ಟಿ.ಹರಿಣಿ, ಶ್ರೀ ಪಿ.ಬಾಲಕೃಷ್ಣ ಬೆಂಗಳೂರು, ಎನ್.ಪದ್ಮನಾಭ ರಾವ್ ಬೆಂಗಳೂರು, ಶ್ರೀ ವಸಂತ ಕೇದಿಗೆ ಮಂಗಳೂರು, ಶ್ರೀ ಪಿ. ಪ್ರಭಾಕರ ಭಂಡಿ

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ-576 102

ಶಾರದಾ ಶಾರದಾಂಭೋಜವದನಾ ವದನಾಂಬುಜೇ । ಸರ್ವದಾಸರ್ವದಾಽಸ್ಮಾಕಂ ಸನ್ನಿಧಿಂ ಸನ್ನಿಧಿಂ ಕ್ರಿಯಾತ್ ॥

## ಶ್ರೀ ಶಾರದಾ ದೇವಸ್ಥಾನದಲ್ಲಿ ನವರಾತ್ರಿ ವಿಶೇಷ ಪೂಜೆಗಳು

ತಾ.15-10-2023ರಿಂದ 23-10-2023ರ ವರೆಗೆ ನವರಾತ್ರಿಯ ಪ್ರತೀ ದಿನ ಶ್ರೀ ದೇವಸ್ಥಾನದಲ್ಲಿ ಮಧ್ಯಾಹ್ನ 12-30ಕ್ಕೆ ಹಾಗೂ ಸಂಜೆ ದುರ್ಗಾನಮಸ್ಕಾರ ಮತ್ತು ರಾತ್ರಿ ಗಂಟೆ 8-00ಕ್ಕೆ ವಿಶೇಷ ಪೂಜೆ ನಡೆಯಲಿರುವುದು.
ಭಕ್ತಾದಿಗಳು ಪ್ರತಿದಿನ ಪೂಜಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿ ಕೃತಾರ್ಥರಾಗಬೇಕಾಗಿ ವಿನಂತಿ.

– ಆಡಳಿತ ಮಂಡಳಿ

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102

### ನವರಾತ್ರಿ ಉತ್ಸವದ ಪ್ರಯುಕ್ತ ನಡೆಯಲಿರುವ ಸಾಂಸ್ಕೃತಿಕ ಸ್ಪರ್ಧೆಗಳು

ತಾ.24-10-2023ನೇ ಮಂಗಳವಾರ ಪೂರ್ವಾಹ್ನ ಗಂಟೆ 9.00 ರಿಂದ ನಮ್ಮ ಸಮಾಜ ಬಾಂಧವರಿಗಾಗಿ ಈ ಕೆಳಗಿನ ಸ್ಪರ್ಧೆಗಳು ನಡೆಯಲಿವೆ.

| ಸ್ಪರ್ಧೆಗಳು | ವಿಭಾಗಗಳು | | | ಅವಧಿ |
|---|---|---|---|---|
| **ಭಕ್ತಿಗೀತೆ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-8ನೇ ತರಗತಿಯವರೆಗೆ | 9ನೇ ತರಗತಿಯಿಂದ ಪದವಿಪೂರ್ವ ತರಗತಿಯವರೆಗೆ | 4 ನಿಮಿಷ |
| | (ಯಾವುದೇ ರೀತಿಯ ಸಂಗೀತ ಉಪಕರಣ ಉಪಯೋಗಿಸಬಾರದು.) | | | |
| **ಚಿತ್ರರಚನೆ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ (ಯಾವುದೇ ಚಿತ್ರ) | 5-8ನೇ ತರಗತಿಯವರೆಗೆ (ಕರ್ನಾಟಕದ ಜಾನಪದ ಕಲೆಗಳು) | 9ನೇ ತರಗತಿಯಿಂದ ಪದವಿಪೂರ್ವ ತರಗತಿಯವರೆಗೆ (ಭಾರತದ ಚಂದ್ರಯಾನ) | 60 ನಿಮಿಷ |
| **ರಂಗವಲ್ಲಿ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-8ನೇ ತರಗತಿಯವರೆಗೆ | 9ನೇ ತರಗತಿಯಿಂದ ಮೇಲ್ಪಟ್ಟು ಎಲ್ಲರಿಗೂ | 60 ನಿಮಿಷ |
| | (3×3 ಅಡಿ ಸ್ಥಳಾವಕಾಶದಲ್ಲಿ ಚುಕ್ಕೆ ಹಾಕಿ ರಂಗವಲ್ಲಿ-ಯಾವುದೇ ಪರಿಕರಣಗಳನ್ನು ಉಪಯೋಗಿಸಬಾರದು) | | | |
| **ಕಂಠಪಾಠ** | 4ನೇ ತರಗತಿಯವರೆಗೆ – ಗುರ್ವಷ್ಟಕಂ | 5-8ನೇ ತರಗತಿಯವರೆಗೆ – ಗುರ್ವಷ್ಟಕಂ | | |
| **ಶಂಖ ಊದುವುದು** (ಮುಕ್ತ ಅವಕಾಶ) | ಶಂಖಗಳನ್ನು ಸ್ಪರ್ಧಿಗಳೇ ತರಬೇಕು | | | |
| **ಚೂರ್ಣಿಕೆ** | ಎಲ್ಲಾ ವಯೋಮಾನದವರಿಗೆ | | | |

**ವಿಶೇಷ ಸೂಚನೆಗಳು :**

1) ಆಸಕ್ತ ಸ್ಪರ್ಧಾಳುಗಳು ಅದೇ ದಿನ ಬೆಳಿಗ್ಗೆ 8.30ಕ್ಕೆ ಹಾಜರಿದ್ದು ತಮ್ಮ ಹೆಸರನ್ನು ನೋಂದಾಯಿಸಿ ಕೊಳ್ಳಬೇಕು, ಕಡ್ಡಾಯವಾಗಿ ಬೆಳಿಗ್ಗೆ 9-30ಕ್ಕೆ ಸ್ಪರ್ಧೆಗಳು ಪ್ರಾರಂಭವಾಗಲಿವೆ
2) ರಂಗವಲ್ಲಿಗೆ ಬಣ್ಣದ ಹುಡಿ ಮತ್ತು ಚಿತ್ರ ರಚನೆಗೆ ಕಾಗದ ಹಾಳೆಗಳನ್ನು ಒದಗಿಸಲಾ ಗುವುದು. ಬೇಕಾದ ಇತರ ಪರಿಕರಗಳನ್ನು ಸ್ಪರ್ಧಾಳುಗಳೇ ತರಬೇಕು.
3) ಹೆಚ್ಚಿನ ನಿಯಮಗಳನ್ನು ಸ್ಪರ್ಧೆ ಆರಂಭವಾಗುವ ಮೊದಲು ಸ್ಪರ್ಧಾಳುಗಳಿಗೆ ತಿಳಿಸಲಾಗುವುದು.
4) ಕನಿಷ್ಠ 3 ಜನ ಸ್ಪರ್ಧಿಗಳು ಇಲ್ಲದಿದ್ದಲ್ಲಿ ಸ್ಪರ್ಧೆ ನಡೆಸುವ ಅಥವಾ ಬಿಡುವ ನಿರ್ಧಾರ ವ್ಯವಸ್ಥಾಪಕರದ್ದು.
5) ಫಲಿತಾಂಶ ನಿರ್ಣಯದಲ್ಲಿ ನಿರ್ಣಾಯಕರ ತೀರ್ಮಾನವೇ ಅಂತಿಮ.

2-30ರಿಂದ ಸಭಾಕಾರ್ಯಕ್ರಮ, ಪ್ರತಿಭಾ ಪುರಸ್ಕಾರ, ಬಹುಮಾನ ವಿತರಣೆ ಮತ್ತು ಮಹಿಳಾ ವೇದಿಕೆಯಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿರುವುದು.

**ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು, ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ ಇವರಿಂದ ಯಕ್ಷಗಾನ :**
**"ವೀರಬರ್ಭರಿಕ" ಸಮಯ: ಸಂಜೆ 4.00 ರಿಂದ**

–ಅಧ್ಯಕ್ಷರು, ಕಲೆ ಮತ್ತು ಸಾಂಸ್ಕೃತಿಕ ವೇದಿಕೆ

## ಶೃಂಗೇರಿ ಜಗದ್ಗುರುಗಳ ಚಾತುರ್ಮಾಸದ ಭೇಟಿ

■...1ನೇ ಪುಟದಿಂದ

ಮಳೆರಾಯನ ಕಾಟವಿರಲಿಲ್ಲ. ಉದಯ ರವಿಯ ಕಿರಣದ ಆಟದೊಂದಿಗೆ ವಾಹನಗಳು ಮಣಿಪಾಲ, ಪರ್ಕಳ, ಹಿರಿಯಡಕ, ಪೆರ್ಡೂರು ಮಾರ್ಗವಾಗಿ ಘಟ್ಟದ ಬುಡದ ಪುಟ್ಟನಾಡಾದ ಹೆಬ್ರಿಯನ್ನು ತಲುಪಿತು. ಪೂರ್ವ ಯೋಜನೆಯಂತೆ ಹೆಬ್ರಿಯ ಶ್ರೀಅನಂತಪದ್ಮನಾಭ ಸನ್ನಿಧಿ ಸಭಾ ಭವನದಲ್ಲಿ ಬೆಳಗ್ಗಿನ ಸ್ವಾದಿಷ್ಟ ಉಪಹಾರ – ಶೀರಾ, ಇಡ್ಲಿ, ವಡಾ, ಚಟ್ನಿ, ಸಾಂಬಾರು, ಚಾ/ಕಾಫಿ ಸೇವಿಸಿ, ಪಶ್ಚಿಮ ಘಟ್ಟದ ಪ್ರಯಾಣಕ್ಕೆ ಸನ್ನದ್ಧರಾದೆವು. ಪ್ರಯಾಣದ ಸಮಯದಲ್ಲಿ ಪ್ರಯಾಣಿಕರಿಗೆ ನೀರಿನ ಬಾಟ್ಲಿ, ಬಿಸ್ಕೆಟ್, ಸೇಬು ಹಾಗೂ ಫ್ರುಟ್ ಜ್ಯೂಸ್ ಪ್ಯಾಕೇಟ್‌ಗಳನ್ನೊಳಗೊಂಡ ಕೈ ಚೀಲವನ್ನು ಸಂಘಟಕರು ವಿತರಿಸಿದರು. ಮಹಿಳೆಯರಿಂದ ಭಜನೆ ಹಾಡುಗಳ ಮೂಲಕ ಕಾಲಕ್ಷೇಪ ನಡೆಯಿತು. ಸೋಮೇಶ್ವರ, ಆಗುಂಬೆ ಮಾರ್ಗವಾಗಿ 10.20ಕ್ಕೆ ಋಷ್ಯಶೃಂಗ ಮುನಿಯ ತಪೋಭೂಮಿ ಶೃಂಗಗಿರಿಗೆ ತಲುಪಿದೆವು. ಶ್ರೀ ಭಾರತೀ ತೀರ್ಥ ಕೃಪಾ ಅತಿಥಿ ಗೃಹದಲ್ಲಿ ಒದಗಿಸಲಾದ ಕೊಠಡಿಗಳಲ್ಲಿ ಸೊತ್ತುಗಳನ್ನಿಟ್ಟು, ಶ್ರೀ ಶಾರದಾಂಬೆಯ ಸೇವೆ ದರ್ಶನಕ್ಕಾಗಿ ಹೊರಟೆವು.

ದೇವಿ ದರ್ಶನದ ಬಳಿಕ ನರಸಿಂಹ ವನದಲ್ಲಿರುವ "ಗುರು ನಿವಾಸ" ಕ್ಕೆ ಶ್ರೀ ಶ್ರೀ ವಿಧುಶೇಖರ ಭಾರತೀ ತೀರ್ಥಂಗಳವರ ದರ್ಶನಾಕಾಂಕ್ಷಿಯಾಗಿ ತೆರಳಿದೆವು. ತಂದ ಹೊರೆಕಾಣಿಕೆ, ಫಲಗಳನ್ನೊಳಗೊಂಡ ಶ್ರೀಗಳ ಆಗಮನದ ಅಭಿಲಾಷಿಗಳಾಗಿ ಸಭಾ ಗೃಹದಲ್ಲಿ ಕುಳಿತೆವು. ಆಗಮಿಸಿದ ಶ್ರೀ ಗುರುಗಳು ಎಲ್ಲಾ ಸಮಾಜ ಬಾಂಧವರನ್ನು ಉದ್ದೇಶಿಸಿ ತಮ್ಮ ಹಿತನುಡಿಗಳಿಂದ ಅನುಗ್ರಹಿಸಿದರು. ರಾಜ್ಯದ ವಿವಿದೆಡೆಯಿಂದ ಬಂದ ಬಾಂಧವರು ಪಾದ ಪೂಜೆ ಹಾಗೂ ಫಲ ಸಮರ್ಪಣೆ ಮಾಡಿ ಗುರುಗಳಿಂದ ಫಲ ಮಂತ್ರಾಕ್ಷತೆಯನ್ನು ಪ್ರಸಾದವಾಗಿ ಸ್ವೀಕರಿಸಿದರು. ಶ್ರೀ ಶಾರದಾಂಬೆಯ ಸನ್ನಿಧಿಯಲ್ಲಿ ಭೋಜನ ಪ್ರಸಾದ ಸ್ವೀಕರಿಸಿ ಅತಿಥಿಗೃಹದ ಮುಂದೆ ಹೊರಟು ನಿಂತಾಗಲೇ ವರುಣದೇವ ತನ್ನ ತೀರ್ಥವನ್ನು ಎಲ್ಲರ ಶಿರದ ಮೇಲೆ ಪ್ರೋಕ್ಷಣೆ ಮಾಡುತ್ತಿದ್ದ.

ಸಂಜೆ 4.30ಕ್ಕೆ ಮತ್ತೆ ಬಸ್ಸನ್ನೇರಿ ಅದೇ ಮಾರ್ಗವಾಗಿ ಹೆಬ್ರಿಗೆ ಬಂದಾಗ ಸೂರ್ಯಾಸ್ತದ ಸಮಯ. ಸಂಜೆಯ ಉಪಹಾರ ಶೀರಾ, ಉಪ್ಪಿಟ್ಟು, ಗೋಳಿಬಜೆ ಕಾಫಿ/ಚಾಗಳನ್ನು ಸನ್ನಿಧಿ ಸಭಾಭವನದಲ್ಲಿ ಸೇವಿಸಿ ಸಂಜೆ 7.15ಕ್ಕೆ ಮರಳಿ ಮಂಟಪಕ್ಕೆ ತಲುಪಿದೆವು.

ವ್ಯವಸ್ಥಿತವಾಗಿದ್ದ ಈ ಧಾರ್ಮಿಕ ಪ್ರವಾಸದ ಪೂರ್ವಭಾವಿ ತಯಾರಿ, ಯೋಜನೆ, ಯೋಚನೆ ಮಾಡಿ ಆಯೋಜಿಸಿದ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಉಡುಪಿ ಇದರ ಪದಾಧಿಕಾರಿಗಳಿಗೆ, ಸಂಘಟಕರಿಗೆ ನಮ್ಮೆಲ್ಲರ ವಂದನೆಗಳು.

ಶ್ರೀ ಶಂಕರಾಚಾರ್ಯರ ಕುರಿತಾದ ಕೆಲವು ಸ್ತೋತ್ರಗಳು **ಕಂಠಪಾಠಕ್ಕೆ**

## ಗುರ್ವಷ್ಟಕಂ

ವಿದಿತಾಖಿಲಶಾಸ್ತ್ರಸುಧಾಜಲಧೇ
ಮಹಿತೋಪನಿಷತ್ಕಥಿತಾರ್ಥನಿಧೇ ।
ಹೃದಯೇ ಕಲಯೇ ವಿಮಲಂ ಚರಣಂ
ಭವ ಶಂಕರದೇಶಿಕ ಮೇ ಶರಣಂ ॥೧॥

ಕರುಣಾವರುಣಾಲಯ ಪಾಲಯ ಮಾಂ
ಭವಸಾಗರದುಃಖವಿದೂನಹೃದಂ ।
ರಚಿತಾಖಿಲದರ್ಶನತತ್ತ್ವವಿದಂ
ಭವ ಶಂಕರದೇಶಿಕ ಮೇ ಶರಣಂ ॥೨॥

ಸುಕೃತೇಽಧಿಕೃತೇ ಬಹುಧಾ ಭವತೋ
ಭವಿತಾಪದದರ್ಶನಲಾಲಸತಾ ।
ಅತಿದೀನಮಿಮಂ ಪರಿಪಾಲಯ ಮಾಂ
ಭವ ಶಂಕರದೇಶಿಕ ಮೇ ಶರಣಂ ॥೩॥

ಭವ ಏವ ಭವಾನಿತಿ ಮೇ ನಿತರಾಂ
ಸಮಜಾಯತ ಚೇತಸಿ ಕೌತುಕಿತಾ ।
ಮಮ ವಾರಯ ಮೋಹಮಹಾಜಲಧಿಂ
ಭವ ಶಂಕರದೇಶಿಕ ಮೇ ಶರಣಂ ॥೪॥

ಭವತಾ ಜನತಾ ಸುಹಿತಾ ಭವಿತಾ
ನಿಜಬೋಧವಿಚಾರಣಚಾರುಮತೇ ।
ಕಲಯೇಶ್ವರಜೀವವಿವೇಕಭಿದಂ
ಭವ ಶಂಕರದೇಶಿಕ ಮೇ ಶರಣಂ ॥೫॥

ಜಗತೀಮವಿತುಂ ಕಲಿತಾಕೃತಯೋ
ವಿಚರಂತಿ ಮಹಾಮಹಸಶ್ಛಪರಮ್ ।
ಅಹಿಮಾಂಶುರಿವಾತ್ರ ವಿಭಾಸಿ ಗುರೋ
ಭವ ಶಂಕರದೇಶಿಕ ಮೇ ಶರಣಂ ॥೬॥

ಗುರುಪುಂಗವ ಪುಂಗವಕೇತನ ತೇ
ಸಮತಾಮಯತಾಂ ನಹಿ ಕೋಽಪಿ ಸುಧೀಃ ।
ಶರಣಾಗತವತ್ಸಲ ತತ್ತ್ವನಿಧೇ
ಭವ ಶಂಕರದೇಶಿಕ ಮೇ ಶರಣಂ ॥೭॥

ವಿದಿತಾ ನ ಮಯಾ ವಿಶದೈಕಕಲಾ
ನ ಚ ಕಿಂಚನ ಕಾಂಚನಮಸ್ತಿಗುರೋ ।
ದ್ರುತಮೇವ ವಿಧೇಹಿ ಕೃಪಾಂ ಸಹಜಾಂ
ಭವ ಶಂಕರದೇಶಿಕ ಮೇ ಶರಣಂ ॥೮॥

Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)

**ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 576 102.**

### 2023-24ನೇ ಸಾಲಿನ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಸಮಾಜದ ಹೆತ್ತವರು/ಪೋಷಕರು ಮೇಲಿನ ಸಂಘದ ಸದಸ್ಯರಾಗಿದ್ದು ಅವರ ಮಕ್ಕಳು ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್, ಬಿ.ಎಡ್, ಡಿಪ್ಲೊಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿದ್ದು, ಹೆತ್ತವರ ವಾರ್ಷಿಕ ಆದಾಯವು ರೂ.3,00,000/-ಕ್ಕೆ ಮೀರದ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಸಂಘದ ವಿದ್ಯಾರ್ಥಿ ವೇತನ ಅರ್ಜಿ ಫಾರಂ(ಶ್ರೀ ಶಾರದಾ ಮಂಟಪದಲ್ಲಿ ಲಭ್ಯವಿದೆ)ನ್ನು ಪೂರ್ಣ ಪ್ರಮಾಣದಲ್ಲಿ ಭರ್ತಿಗೊಳಿಸಿ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿಯೊಂದಿಗೆ ದಿನಾಂಕ 30.09.2023 ರೊಳಗೆ ಶ್ರೀ ಶಾರದಾ ಮಂಟಪಕ್ಕೆ ತಲುಪಿಸಬೇಕು. **- ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

### ಡಾ| ದಯಾನಂದ ಎಸ್.ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**2023-2024**

ಡಾ| ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು "ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿ ವೇತನ"ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿ ವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. **2023-2024ನೇ** ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ** ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿ ವೇತನವನ್ನು ನೀಡಲಾಗುವುದು. **ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು.** ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿ ವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು **ಕೈಬರಹದಲ್ಲಿ ಅರ್ಜಿ ಫಾರಂ ಬರೆದು ಪೋಷಕರ ಸಹಿಯೊಂದಿಗೆ,** ಪರೀಕ್ಷೆಯ ಅಂಕಪಟ್ಟಿ ಹಾಗೂ ವ್ಯಾಸಂಗ ಪ್ರಮಾಣ ಪತ್ರ, ಬ್ಯಾಂಕ್ ಖಾತೆಯ ವಿವರಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ **ತಾ.30-09-2023**ರ ಒಳಗೆ ತಲುಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳೂ ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ಫೋನ್ : 0820-2522408)ಯಲ್ಲಿ ವಿಚಾರಿಸಬಹುದು.**

**-ಅಧ್ಯಕ್ಷರು, ವಿದ್ಯಾರ್ಥಿ ವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

### ಅಂಬಲ್ಪಾಡಿ ಕೃಷ್ಣ ರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ 2023-2024

**ಉಡುಪಿ ಮತ್ತು ದ.ಕ. ಜಿಲ್ಲೆಗಳ** ವಿಶ್ವವಿದ್ಯಾಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ ಎಲ್ಲಾ ವಿಷಯಗಳಲ್ಲಿ ರ‍್ಯಾಂಕ್ ಗಳಿಸಿದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ‍್ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರ, ಬ್ಯಾಂಕ್ ಖಾತೆಯ ವಿವರಗಳೊಂದಿಗೆ **ತಾ.30-09-2023**ರೊಳಗೆ **ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ** ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ.

**- ಅಧ್ಯಕ್ಷರು, ವಿದ್ಯಾರ್ಥಿ ವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

### ಉದಯಚಂದ್ರ ಪ್ರತಿಭಾ ಪುರಸ್ಕಾರ 2023-2024

ಸಂಘದ ಯುವವೇದಿಕೆಯ ಆಶ್ರಯದಲ್ಲಿ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ** ನಮ್ಮ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರ ನೀಡಲಾಗುವುದು. **2022-23ನೇ** ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪದವಿಪೂರ್ವ ಮೂರು ವಿಭಾಗಗಳಲ್ಲಿ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಒಬ್ಬೊಬ್ಬ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ಅಂಕಪಟ್ಟಿಯ ಪ್ರತಿ, ವಿಳಾಸ, ಫೋನ್ ನಂಬ್ರ, ಬ್ಯಾಂಕ್ ಖಾತೆಯ ವಿವರಗಳೊಂದಿಗೆ ಅರ್ಜಿಯನ್ನು **ಅಧ್ಯಕ್ಷರು, ಯುವವೇದಿಕೆ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು ಉಡುಪಿ - 576 102** ಇಲ್ಲಿಗೆ **ತಾ.30-09-2023**ರೊಳಗೆ ಕಳುಹಿಸಿ ಕೊಡಬೇಕು.

**- ಅಧ್ಯಕ್ಷರು, ಯುವ ಮತ್ತು ಕ್ರೀಡಾ ವೇದಿಕೆ.**

### ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**ಉಡುಪಿ ಕುಕ್ಕಿಕಟ್ಟೆಯ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಯ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.)** ವತಿಯಿಂದ **2023-24ನೇ** ಸಾಲಿನ **ದಿ| ಡಾ| ವೈ. ಚಂದ್ರಶೇಖರರಾವ್ ಸ್ಮಾರಕ ವಿದ್ಯಾರ್ಥಿ ವೇತನಕ್ಕಾಗಿ** ಪ್ರತಿಭಾನ್ವಿತ ಹಾಗೂ ಆರ್ಥಿಕ ಸಹಾಯ ಅಗತ್ಯವಿರುವ ತಾಂತ್ರಿಕ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗಾಗಿ **ದಿ| ಸಾತ್ವಿಕ್ ಶಾಸ್ತ್ರಿ ಸ್ಮಾರಕ ವಿದ್ಯಾರ್ಥಿ ವೇತನಕ್ಕಾಗಿಯೂ** ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಕೈಬರಹದ ಅರ್ಜಿಯಲ್ಲಿ ತಮ್ಮ ವಿವರಗಳೊಂದಿಗೆ ಆದಾಯ ಹಾಗೂ ವ್ಯಾಸಂಗ ದೃಢಪತ್ರಿಕೆಗಳನ್ನು ಲಗತ್ತಿಸಿರಬೇಕು. ತಂದೆ-ತಾಯಿಯರ ವೃತ್ತಿ, ವಿಳಾಸ, ದೂರವಾಣಿ ಸಂಖ್ಯೆ ಹಾಗೂ ನಿಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು (ಪಾಸ್ ಬುಕ್ಕಿನ ಮೊದಲ ಹಾಳೆಯ ಪ್ರತಿ) ಅರ್ಜಿಯಲ್ಲಿ ನಮೂದಿಸಿರಬೇಕು. ಕ್ರಮಬದ್ಧವಾಗಿ ಬರೆದ ಅರ್ಜಿಗಳನ್ನು ಮಾತ್ರ ಗಮನಿಸಲಾಗುವುದು. ಅರ್ಜಿ ಕಳುಹಿಸಲು ಕೊನೆಯ **ದಿನಾಂಕ 30-11-2023.** ಅರ್ಜಿಯನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

**ಡಾ| ವೈ.ಸುದರ್ಶನ ರಾವ್,**

ಇಂಚರ ಸರ್ಜಿಕಲ್ ಕ್ಲಿನಿಕ್. ಎ.ಜೆ.ಅಲ್ಸೆ ರಸ್ತೆ, ಪ್ರಸಾದ ನೇತ್ರಾಲಯದ ಎದುರು, ಉಡುಪಿ-576101

### ದಿ| ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ ಕುಳಾಯಿ

ಕೋಂ.ಕೆ. ಸದಾಶಿವ ಶಾಸ್ತ್ರಿ, 3-68(7), ಶ್ರೀ ವಿಷ್ಣುಮೂರ್ತಿ ದೇವಸ್ಥಾನ ರಸ್ತೆ, ಕುಳಾಯಿ-575019. ಮೊ : 8762235801.

### ಪ್ರತಿಭಾ ಪುರಸ್ಕಾರ

2022-23ರ ಸಾಲಿನ ಶೈಕ್ಷಣಿಕ ವರ್ಷದ ಪ್ರೌಢಶಾಲಾ (ಎಸ್.ಎಸ್.ಎಲ್.ಸಿ.) ಮತ್ತು ಪದವಿ ಪೂರ್ವ ಶಿಕ್ಷಣದ ಅಂತಿಮ ಪರೀಕ್ಷೆಯಲ್ಲಿ (ಪಿ.ಯು.ಸಿ.) ವಿಶಿಷ್ಟ ಶ್ರೇಣಿಯಲ್ಲಿ (85% ಅಧಿಕ) ತೇರ್ಗಡೆಯಾದ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈರಸ್ತೆ, ಕರಂಗಲ್ಪಾಡಿ, ಮಂಗಳೂರು-4 ಇಲ್ಲಿ ತಾ.29.10.2023ರಂದು ದಸರಾ ಪ್ರಯುಕ್ತ ನಡೆಯುವ ನಾಡಹಬ್ಬದಂದು ಪ್ರತಿಷ್ಠಾನದ ವತಿಯಿಂದ ಅಭಿನಂದಿಸಲಾಗುವುದು. ದ.ಕ. ಮತ್ತು ಉಡುಪಿ ಜಿಲ್ಲಾ ಅರ್ಹ ಆಸಕ್ತ ವಿದ್ಯಾರ್ಥಿ/ವಿದ್ಯಾರ್ಥಿನಿಯರು ತಮ್ಮ ಅಂಕ ಪಟ್ಟಿಯ ಯಥಾ ನಕಲು, ವಿಳಾಸ, ದೂರವಾಣಿ ಸಂಖ್ಯೆ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಇತ್ಯಾದಿಗಳನ್ನು **ತಾ.30.09.2023ರ** ಒಳಗಾಗಿ ಮೇಲ್ಕಾಣಿಸಿದ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ.

**-ಕೆ. ಸದಾಶಿವ ಶಾಸ್ತ್ರೀ, 8762235801**



**Buying and selling shares as easy as checking your emails**

Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com



**RAJESH POWER PRESS**

PRINTERS & PUBLISHERS

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

QUALITY FIRST AND ALWAYS







ಕೆ. ದಿನಮಣಿ ಶಾಸ್ತ್ರೀ ಮೊಬೈಲ್ : 8277190632, 9482284970

**ಚಿತ್ತಾರ ಫೋಟೋ ಆರ್ಟ್**

ಶುಭ ಸಮಾರಂಭಗಳ ಛಾಯಾಚಿತ್ರ ಮತ್ತು ವೀಡಿಯೋಗಾಗಿ ಕರೆಮಾಡಿ

ಚಿತ್ತಾರ, 3/96, ನವೋದಯನಗರ, ಚಾಂತಾರು, ಅಗ್ರಹಾರ, ಬ್ರಹ್ಮಾವರ-576213.



*With Best Complimemts From*

SRI M. SHAILESH RAO Ph : 9448624324
B.E., Civil
Civil Engineer & Contractor
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com

## ಶುಭ ವಿವಾಹ

ಶ್ರೀಮತಿ ಮಂಜುಳಾ ಮತ್ತು ದಿ| ಶ್ರೀ ಸುಬ್ರಹ್ಮಣ್ಯ ರಾವ್ ಅಲೆವೂರು ಅವರ ಪುತ್ರ **ಚಿ| ಕೌಶಿಕ್ ರಾವ್**ರವರ ವಿವಾಹವು ಶ್ರೀಮತಿ ಸತ್ಯಲಕ್ಷ್ಮಿ ಮತ್ತು ಶ್ರೀ ಪ್ರಭಾಕರ ರಾವ್ ಕೆ.ಆರ್. ಅವರ ಪುತ್ರಿ **ಚಿ| ಸೌ| ಐಶ್ವರ್ಯ**ರವರೊಂದಿಗೆ ತಾ.18.08.2023ರಂದು ಮೈಸೂರಿನ ಗೋವಿಂದಕೃಷ್ಣ ಕನ್ವೆನ್ಷನ್ ಸಭಾ ಭವನದಲ್ಲಿ ಜರಗಿತು.

★★★★ ★★★★

ಶ್ರೀಮತಿ ಸರೋಜ ಮತ್ತು ಶ್ರೀ ಆರ್. ಕಮಲಾಕರ ಅವರ ಪುತ್ರ **ಚಿ| ನಿರಂಜನ**ರವರ ವಿವಾಹವು ಶ್ರೀಮತಿ ಹರಿಣಿ ಮತ್ತು ಶ್ರೀ ಶ್ರೀಕಾಂತ್ ಅವರ ಪುತ್ರಿ **ಚಿ|ಸೌ| ವರ್ಷಿಣಿ ಎಸ್** ರವರೊಂದಿಗೆ ತಾ.17.05.2023ರಂದು "ಶ್ರೀ ದುರ್ಗಾ ಧ್ಯಾನ ಮಂದಿರ" ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಹತ್ತಿರ, ದೇವಿಪುರ ತಲಪಾಡಿ, ಮಂಗಳೂರು ಇಲ್ಲಿ ಜರಗಿತು.

★★★★ ★★★★

ಶ್ರೀಮತಿ ಗಿರಿಜಾ ಎಸ್. ರಾವ್ ಮತ್ತು ದಿ| ಸುಬ್ರಾಯ ರಾಯರ ಪೌತ್ರ, ಶ್ರೀಮತಿ ಸವಿತಾ ಮತ್ತು ಶ್ರೀ ರಾಜೇಶ್ ಎಸ್. ರಾವ್‌ರ ಪುತ್ರ **ಚಿ| ಅನೀಶ್**ರವರ ವಿವಾಹವು ಶ್ರೀಮತಿ ಜಯಂತಿ ಮತ್ತು ದಿ| ಬಾಲಕೃಷ್ಣ ಭಟ್ ಅವರ ಪುತ್ರಿ **ಚಿ|ಸೌ| ಹರ್ಷಿಣಿ**ರವರೊಂದಿಗೆ ತಾ. 24.08.2023ರಂದು ಶ್ರೀ ಶಾರದಾ ಮಂಟಪದಲ್ಲಿ ಜರಗಿತು.

★★★★ ★★★★

ಬಜೆ ಶ್ರೀಮತಿ ವೀಣಾ ಮತ್ತು ಶ್ರೀ ಬಾಲಕೃಷ್ಣ ರಾವ್‌ರ ಪುತ್ರ **ಚಿ| ರಾಜೇಂದ್ರ**ರವರ ವಿವಾಹವು ಮುನಿಯಾಲು ಶ್ರೀಮತಿ ರತ್ನ ಮತ್ತು ಶ್ರೀ ರಾಮಮೋಹನ್ ರಾವ್ ರವರ ಪೌತ್ರಿ, ಶ್ರೀಮತಿ ಜಯಂತಿ ಮತ್ತು ಶ್ರೀ ಕೃಷ್ಣರಾಜ್ ರಾವ್ ಅವರ ಪುತ್ರಿ **ಚಿ|ಸೌ| ಶ್ರುತಿ**ರವರೊಂದಿಗೆ ತಾ.28.08.2023ರಂದು ಶ್ರೀ ಶಾರದಾ ಮಂಟಪದಲ್ಲಿ ಜರಗಿತು.

★★★★ ★★★★


ಶ್ರೀಮತಿ ಸುಧಾ ಮತ್ತು ಶ್ರೀ ಕುಂಜಾರು ಗಣೇಶ್ ರಾವ್ ಅವರ ಪುತ್ರಿ **ಚಿ|ಸೌ| ಸುಪ್ರಿಯಾ** ರವರ ವಿವಾಹವು ಶ್ರೀಮತಿ ಸವಿತಾ ಮತ್ತು ಶ್ರೀ ಗಣೇಶ್ ರಾವ್ ಮಂಗಳೂರು ಅವರ ಪುತ್ರ **ಚಿ| ಕೌಶಿಕ್** ರವರೊಂದಿಗೆ ತಾ.30.08.2023ರಂದು "ಅಮೃತ್ ಗಾರ್ಡನ್" ಅಂಬಾಗಿಲು, ಉಡುಪಿಯಲ್ಲಿ ಜರಗಿತು.

★★★★ ★★★★

ಶ್ರೀಮತಿ ಶಾರದಾ ಮತ್ತು ಶ್ರೀ ಗಣೇಶ್ ರಾವ್ ಅವರ ಪುತ್ರಿ **ಚಿ|ಸೌ| ಶ್ರಾವ್ಯ** (ಶ್ರೀಮತಿ ಪ್ರಸನ್ನ ಮತ್ತು ಶಿವರಾವ್‌ರವರ ಪೌತ್ರಿ) ಇವರ ವಿವಾಹವು ಶ್ರೀಮತಿ ಸುಕನ್ಯಾ ಮತ್ತು ಶ್ರೀ ಗುರುಪ್ರಸಾದ್ ರಾವ್ ಅವರ ಪುತ್ರ **ಚಿ| ಸೂರಜ್** ರವರೊಂದಿಗೆ ತಾ.08.09.2023ರಂದು ಉಡುಪಿ ಕುಂಜಿಬೆಟ್ಟು 'ಶ್ರೀ ಶಾರದಾ ಮಂಟಪ'ದಲ್ಲಿ ಜರಗಿತು.

## ಗೃಹ ಪ್ರವೇಶ

ಸೂರಜ್ ಅರಿಕ್ಕಳ ಮತ್ತು ಅಕ್ಷತಾರವರ ಗೃಹಪ್ರವೇಶವು ತಾ. 25.08.2023 ರಂದು ಬೆಂಗಳೂರಿನ 'ಸೋನಾ ವಿಸ್ತಾಸ್'ನಲ್ಲಿ ನೆರವೇರಿತು.



ಸುಬ್ರಹ್ಮಣ್ಯ ಹೆಬ್ಬಾರ್, ex-army ಕೊಲ್ಲೂರು ಬಿನ್ ದಿ. ಮಂಜುನಾಥ ಹೆಬ್ಬಾರ್ ಇವರನ್ನು ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಕೊಲ್ಲೂರು ಗ್ರಾಮ ಪಂಚಾಯತಿಯ ಕಡೆಯಿಂದ ಗೌರವಿಸಲಾಯಿತು.


## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಉಡುಪಿ

ಶ್ರೀ ಶಾರದಾ ಮಂಟಪ, ಶಾರದಾ ನಗರ, ಕುಂಜಿಬೆಟ್ಟು

ಫೋ : 0820-295844, 8971185844 ಉಡುಪಿ - 576102

### ಸಹಾಯಕ ಮೆನೇಜರ್ ಬೇಕಾಗಿದ್ದಾರೆ

**ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ನ ಆಶ್ರಯದಲ್ಲಿ ನಡೆಯುತ್ತಿರುವ ಶ್ರೀ ಶಾರದಾ ಮಂಟಪಕ್ಕೆ ಸಹಾಯಕ ಮೆನೇಜರ್ ಒಂದು ಹುದ್ದೆಗಾಗಿ ಅರ್ಜಿ ಆಹ್ವಾನಿಸಲಾಗಿದೆ.**

**ಆಸಕ್ತ ಸ್ಥಳೀಯ ಸಮಾಜಬಾಂಧವರು ಕಂಪ್ಯೂಟರ್ ಪರಿಣಿತರಾಗಿದ್ದು, ಪದವೀಧರ ಪುರುಷ ಅಭ್ಯರ್ಥಿಗಳು ತಾ. 30.09.2023ರ ಒಳಗೆ ತಮ್ಮ ಪೂರ್ಣ ವಿಳಾಸ, ಮೊಬೈಲ್ ನಂಬರ್‌ನೊಂದಿಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ ಕಾರ್ಯದರ್ಶಿ ಪ್ರಭಾಕರ ಭಂಡಿ (9449254846) ಸಂಪರ್ಕಿಸಬಹುದು.**


## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 4-00ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4-00ರಿಂದ

**ತಾ.02-10-2023 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.100/-)**

**ತಾ.22-09-2023 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.20-09-2023 ಮತ್ತು ತಾ.03-10-2023 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಕನ್ಯಾ ಮಾಸದ ವಿಶೇಷ ದಿನಗಳು

| | | | |
|---|---|---|---|
| 15.09.2023 | ಅಮಾವಾಸ್ಯೆ | 30.09.2023 | ವರ್ಷಋತು ಭಾದ್ರಪದ ಮಾಸದ ಕೃಷ್ಣ ಪಕ್ಷಾರಂಭ ಪಿತೃಪಕ್ಷ-ಮಹಾಲಯ ಆರಂಭ |
| 16.09.2023 | ವರ್ಷಋತು ಭಾದ್ರಪದ ಮಾಸದ ಶುಕ್ಲಪಕ್ಷಾರಂಭ, ಸಾಮೋಪಾಕರ್ಮ | 02.10.2023 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 8.43ಕ್ಕೆ |
| 17.09.2023 | ಕನ್ಯಾ ಸಂಕ್ರಮಣ | 10.10.2023 | ಸರ್ವೈಕಾದಶಿ |
| 18.09.2023 | ಗೌರಿ ತೃತೀಯ | 14.10.2023 | ಮಹಾಲಯ ಅಮಾವಾಸ್ಯೆ ಸರ್ವಪಿತೃದರ್ಶಃ |
| 19.09.2023 | ಗಣೇಶ ಚತುರ್ಥಿ | 15.10.2023 | ಶರದೃತು ಅಶ್ವಯುಜ ಮಾಸದ ಶುಕ್ಲ ಪಕ್ಷಾರಂಭ, ನವರಾತ್ರಿ ಆರಂಭ |
| 25.09.2023 | ಸ್ಮಾರ್ತೈಕಾದಶಿ | 17.10.2023 | ತುಲಾ ಸಂಕ್ರಮಣ |
| 26.09.2023 | ಭಾಗವತ - ವೈಷ್ಣವೈಕಾದಶಿ | | |
| 28.09.2023 | ಅನಂತಚತುರ್ದಶಿ | | |
| 29.09.2023 | ಹುಣ್ಣಿಮೆ | | |

## ವಿಳಾಸ ಬದಲಾವಣೆ

**ಶ್ರೀ ಕಮಲಾಕರ್ ಆರ್.**

# 1202, ಹಿಲ್‌ಕ್ರೆಸ್ಟ್ ಅಪಾರ್ಟ್‌ಮೆಂಟ್, ಕುಳೂರು ಫೆರಿ ರಸ್ತೆ, ಲೇಡಿ ಹಿಲ್, ಚಿಲಿಂಬಿ, ಮಂಗಳೂರು - 575006

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ

**ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ-576101.**

### 2022-23ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸು

(ಸದಸ್ಯರಿಗೆ ಮಾತ್ರ)

ಮಾನ್ಯ ಸದಸ್ಯ ಬಾಂಧವರೇ, ತಾ. 27.08.2023

ನಮ್ಮ ಸಂಘದ 2022-23ನೇ ಸಾಲಿನ ವಾರ್ಷಿಕ ಮಹಾಸಭೆಯು **ದಿನಾಂಕ 08.10.2023ನೇ ರವಿವಾರ** ಸಂಜೆ ಘಂಟೆ 4.00 ಕ್ಕೆ ಸರಿಯಾಗಿ "**ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪ**"ದಲ್ಲಿ ನಡೆಯಲಿರುವುದು. **ಸಂಘದ ಸದಸ್ಯರೆಲ್ಲರೂ** ಈ ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

**ವಿಷಯ ಸೂಚಿ**

1. ಪ್ರಾರ್ಥನೆ
2. ಶ್ರದ್ಧಾಂಜಲಿ
3. ಸ್ವಾಗತ
4. 2022-23ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸಿನ ಅಂಗೀಕಾರ.
5. 2021-22ನೇ ಸಾಲಿನ ವಾರ್ಷಿಕ ಮಹಾಸಭೆಯ ವರದಿಯ ಮಂಡನೆ ಮತ್ತು ಅಂಗೀಕಾರ.
6. 2022-23ನೇ ವರ್ಷದ ಕಾರ್ಯಕ್ರಮಗಳ ಮತ್ತು ಚಟುವಟಿಕೆಗಳ ವರದಿಯ ಮಂಡನೆ ಮತ್ತು ಅಂಗೀಕಾರ.
7. 2022-23ನೇ ವರ್ಷದ ಆಯ-ವ್ಯಯ ಮತ್ತು ಆಸ್ತಿ-ಜವಾಬ್ದಾರಿ ತಃಖ್ತೆಗಳ ಪರಿಶೋಧಿತ ವರದಿಯ ಮಂಡನೆ ಮತ್ತು ಅಂಗೀಕಾರ.
8. ಮುಖ್ಯ ಸಭಾಂಗಣದ ಎ.ಸಿ. ಅಳವಡಿಕೆಯ ಲೆಕ್ಕಾಚಾರ ಮಂಡನೆ ಹಾಗೂ ಅಂಗೀಕಾರ
9. 2023-24ನೇ ವರ್ಷದ ಅಂದಾಜು ಆಯ-ವ್ಯಯ ಪಟ್ಟಿಯ ಮಂಡನೆ ಮತ್ತು ಅಂಗೀಕಾರ.
10. 2023-24ನೇ ವರ್ಷಕ್ಕೆ ಲೆಕ್ಕಪರಿಶೋಧಕರ ನೇಮಕ.
11. ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳು.
12. ಅಧ್ಯಕ್ಷರ ಮಾತು.
13. ಧನ್ಯವಾದ

(ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ)

-**ಪಿ. ಪ್ರಭಾಕರ ಭಂಡಿ,** ಕಾರ್ಯದರ್ಶಿ

**ವಿ.ಸೂ : ಚರ್ಚೆಯ ವಿಷಯ ಇದ್ದಲ್ಲಿ ಅದನ್ನು ದಿನಾಂಕ 30.09.2023 ಸಂಜೆ 6 ಗಂಟೆಯ ಒಳಗೆ (ಕಛೇರಿ ಕೆಲಸ್ ಸಮಯದಲ್ಲಿ) ಕಾರ್ಯದರ್ಶಿಯವರಿಗೆ ಲಿಖಿತ ಮೂಲಕ ಕಛೇರಿಗೆ ತಲುಪಿಸಬೇಕು.**

## ನಿಧನ



ಶ್ರೀ ಶಾಂತರಾಮ ಗೋಪಾಲಕೃಷ್ಣ ಶಾನುಭಾಗ (93 ವ) ನಿವೃತ್ತ ಮುಖ್ಯಶಿಕ್ಷಕರು ತಾ.10.08.2023ರಂದು ಧಾರೇಶ್ವರದಲ್ಲಿ ನಿಧನರಾದರು. ಅವರು ಇಬ್ಬರು ಪುತ್ರರು ಹಾಗೂ ಒಬ್ಬಳು ಪುತ್ರಿಯನ್ನು ಅಗಲಿದ್ದಾರೆ.

★★★★ ★★★★



ಶ್ರೀ ಗಣೇಶ್ ರಾವ್ ನಟ್ಟೋಜಿ ಶ್ಯಾರಾ ಅವರ ಪತ್ನಿ ಗೋಪಿ ಯು.ಕೆ. ಅವರು 58ನೇ ವಯಸ್ಸಿನಲ್ಲಿ ತಾ.18.08.2023ರಂದು ಬೆಂಗಳೂರಿನಲ್ಲಿ ನಿಧನರಾದರು. ಅವರು ಪತಿ ಮತ್ತು ಒಬ್ಬ ಪುತ್ರನನ್ನು ಅಗಲಿದ್ದಾರೆ.

★★★★ ★★★★



ಸುಳ್ಕೇರಿ ಹಟ್ರಂಜ ಶ್ರೀ ಸುಬ್ರಾಯ ಭಟ್ ಅವರ ಪತ್ನಿ ಶ್ರೀಮತಿ ಚಂದ್ರಾವತಿಯವರು 75ನೇ ವಯಸ್ಸಿನಲ್ಲಿ ತಾ.19.08.2023ರಂದು ನಿಧನರಾದರು.

★★★★ ★★★★



ಕಬ್ಬಿನಾಲೆ ಮುದ್ರಾಡಿ ಶ್ರೀಯುತ ಗೋವಿಂದ ರಾವ್‌ರವರು 85ನೇ ವಯಸ್ಸಿನಲ್ಲಿ ತಾ.19.08.2023ರಂದು ನಿಧನರಾದರು. ಅವರು ಪತ್ನಿ, ಒಬ್ಬ ಪುತ್ರ ಹಾಗೂ ಮೂವರು ಪುತ್ರಿಯರನ್ನು ಅಗಲಿದ್ದಾರೆ.

★★★★ ★★★★



ಚಾರ ಚಂದ್ರಶೇಖರ್ ಅವರು 70ನೇ ವಯಸ್ಸಿನಲ್ಲಿ ತಾ.21.08.2023 ರಂದು ಬೆಂಗಳೂರಿನಲ್ಲಿ ನಿಧನರಾದರು. ಅವರು ಇಬ್ಬರು ಪುತ್ರರನ್ನು ಅಗಲಿದ್ದಾರೆ.

★★★★ ★★★★




ಶ್ರೀ ಪದ್ಮನಾಭ ರಾವ್ ಪೆರ್ಡೂರು, (ರಿಟೈರ್ಡ್ ಮ್ಯಾನೇಜರ್, ಕೆನರಾ ಬ್ಯಾಂಕ್) ದಿ। ಶ್ರೀ ದಾಸಪ್ಪಯ್ಯ ಮತ್ತು ದಿ। ಶ್ರೀಮತಿ ಗಿರಿಜಾ ಅವರ ಸುಪುತ್ರ ಅವರು ತಮ್ಮ 70ನೇ ವಯಸ್ಸಿನಲ್ಲಿ ತಾ.23.08.2023 ನಿಧನರಾದರು. ಅವರು ಪತ್ನಿ, ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ.

★★★★ ★★★★



ತೆಂಕಿಲ ಕುಟುಂಬದ ಶ್ರೀ ಅಳಕೆ ಕಿಶೋರ್‌ಕುಮಾರ್ (50 ವರ್ಷ) (ಕೀರ್ತಿಶೇಷ ಅಳಕೆ ನಾರಾಯಣ ರಾವ್ ಮತ್ತು ಯಶೋಧ ದಂಪತಿಗಳ ದ್ವಿತೀಯ ಪುತ್ರ) ತಾ.27.08.2023 ರಂದು ನಿಧನರಾದರು. ಅವರು ಪತ್ನಿ, ಒಬ್ಬ ಪುತ್ರ, ಒಬ್ಬಳು ಪುತ್ರಿಯನ್ನು ಅಗಲಿದ್ದಾರೆ.

★★★★ ★★★★



ಮುಟ್ಲಪಾಡಿ ಹಿರಿಯ ಪ್ರಾಥಮಿಕ ಶಾಲೆ, ಶಿರ್ವದ ನಿವೃತ್ತ ಮುಖ್ಯೋಪಾಧ್ಯಾಯ ಶ್ರೀ ಮಾಧವ ರಾವ್ (68 ವರ್ಷ) ಬಳ್ಳಿ ಮನೆ, ಎಲ್ಲೂರು ತಾ.25.08.2023ರಂದು ನಿಧನರಾದರು. ಅವರು ಪತ್ನಿ, ಒಬ್ಬ ಪುತ್ರ ಮತ್ತು ಮೂವರು ಪುತ್ರಿಯರನ್ನು ಅಗಲಿದ್ದಾರೆ.

★★★★ ★★★★



ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಬಂಟ್ವಾಳ ವಲಯ – ವಿಟ್ಲ ಇದರ ಮಾಜಿ ಅಧ್ಯಕ್ಷರಾದ ಪಿ. ವಿದ್ಯಾಪತಿ ರಾವ್ ಓಡತಡ್ಕ ಅಲ್ಲಿಪಾದೆಯವರು ತಾ.26.08.2023ರಂದು ನಿಧನರಾದರು. ಅವರು ಪತ್ನಿ ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ.

★★★★ ★★★★



ಬೆಂಗಳೂರಿನಲ್ಲಿರುವ ಶ್ರೀ ಕಬ್ಬಿನಾಲೆ ವಾಸುದೇವ ಹೆಬ್ಬಾರ್ ಅವರ ಪತ್ನಿ ಶ್ರೀಮತಿ ಮಂಜುಳಾ ವಿ. ಹೆಬ್ಬಾರ್ ಅವರು 66ನೇ ವಯಸ್ಸಿನಲ್ಲಿ ತಾ.24.08.2023 ರಂದು ನಿಧನರಾದರು. ಅವರು ಪತಿ ಮತ್ತು ಇಬ್ಬರು ಮಕ್ಕಳನ್ನು ಅಗಲಿದ್ದಾರೆ.

★★★★ ★★★★



ದಿ। ಶ್ರೀ ಕಾರ್ಕಳ ಸೂರ್ಯನಾರಾಯಣ ರಾವ್ ಅವರ ಪತ್ನಿ ಶ್ರೀಮತಿ ಇಂದಿರಾ ಎಸ್. ರಾವ್ (83 ವರ್ಷ) ಇವರು ತಾ.23.08.2023 ರಂದು ನಿಧನರಾದರು. ಅವರು ಒಬ್ಬ ಪುತ್ರ ಡಾ। ಶರತ್ ರಾವ್ ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

★★★★ ★★★★



ಯಕ್ಷಗಾನದ ಹಿರಿಯ ನೇಪಥ್ಯ ಕಲಾವಿದ, ಮೂಡುಬಿದಿರೆ ನಾಗರಕಟ್ಟೆ ನಿವಾಸಿ ಬೊಕ್ಕಸ ಜಗನ್ನಾಥ ರಾವ್ (76 ವರ್ಷ) ಅವರು ತಾ.25.08.2023ರಂದು ನಿಧನರಾದರು. ಇವರು ಪತ್ನಿ, ಸಹೋದರರು ಹಾಗೂ ಬಂಧುಬಳಗದವರನ್ನು ಅಗಲಿದ್ದಾರೆ.

★★★★ ★★★★




ಕೇದಿಗೆ ಕುಟುಂಬದ ಶ್ರೀ ವಿಠಲ ರಾವ್ ಅವರು 80ನೇ ವಯಸ್ಸಿನಲ್ಲಿ ತಾ.30.08.2023ರಂದು ನಿಧನರಾದರು. ಅವರು ಪತ್ನಿ, ಒಬ್ಬ ಪುತ್ರ ಮತ್ತು ಇಬ್ಬರು ಪುತ್ರಿಯನ್ನು ಅಗಲಿದ್ದಾರೆ.

★★★★ ★★★★



ವಾಶಿಯಲ್ಲಿ ವಾಸವಾಗಿರುವ ಶ್ರೀ ನಂದಾವರ ಸುರೇಶ್ ರಾವ್ (74 ವರ್ಷ) ಅವರು ತಾ.30.08.2023ರಂದು ನಿಧನರಾದರು. ಅವರು ಪತ್ನಿ, ಇಬ್ಬರು ಪುತ್ರಿಯರು ಮತ್ತು ಒಬ್ಬ ಪುತ್ರನನ್ನು ಅಗಲಿದ್ದಾರೆ.

★★★★ ★★★★



ಉಡುಪಿಯ ದಿ। ಕೆ. ಹರಿದಾಸ ರಾಯರ ಪತ್ನಿ ಸುಲೋಚನಾ ರಾವ್ ಅವರು 89ನೇ ವಯಸ್ಸಿನಲ್ಲಿ ತಾ.26.08.2023ರಂದು ಅಸೌಖ್ಯದಿಂದ ನಿಧನರಾದರು. ಅವರು ಇಬ್ಬರು ಪುತ್ರರು ಹಾಗೂ ಮೂವರು ಪುತ್ರಿಯರನ್ನು ಅಗಲಿದ್ದಾರೆ.



**ಉಡುಪಿ ಶಾರದಾ ಭಜನಾ ಮಂಡಳಿಯವರಿಂದ ಮನೆ ಮನೆ ಭಜನೆ ಕಾರ್ಯಕ್ರಮ**

## ಮಹಾಭಾರತ

ಎಲ್ಲ ಮಾನುಷ ಪ್ರಯತ್ನಗಳೂ ನಿರರ್ಥಕ.....
ಕಾಣದ ವಿಧಿಯ ಕೈಚಳಕವೇ ನಿರ್ಣಾಯಕ.....!

ತಾನೊಂದು ಬಗೆದರೆ ಮಾನವ.....
ಬೇರೊಂದು ಬಗೆವುದು ದೈವ.....!

ವೀರ ಕ್ಷತ್ರಿಯನಿಗೆ ಕರ್ತವ್ಯವೇ ದೇವರು.....
ಬಂಧು ಬಳಗ ವ್ಯಾಮೋಹ ಸಲ್ಲದು.....!

ನಿನ್ನ ಕರ್ಮವನ್ನು ಮಾತ್ರ ಮಾಡು.....
ಫಲದ ಗೊಡವೆ ನಿನಗೆ ಬೇಡ.....!

ಜೀವನದಲ್ಲಿ ಎಲ್ಲವನ್ನೂ ಕಳೆದುಕೊಂಡೆನೆಂದು ದುಃಖ ಪಡದಿರು.....
ಕಳೆದುಕೊಳ್ಳಲು ನೀನು ತಂದಿರುವುದಾದರೂ ಏನನ್ನು?.....!

ಆಸ್ತಿಗಾಗಿ ಸಹೋದರರ ನಡುವಣ ಕಾಳಗ.....
ಸಂಕೀರ್ಣ ಮಾನವ ಸ್ವಭಾವದ ಅನಾವರಣ.....!

ಸ್ವಪ್ರತಿಷ್ಠೆ, ಸ್ವಾರ್ಥ, ದುರಹಂಕಾರಗಳೇ ವಿಜೃಂಭಿಸುವಾಗ
ಕೊನೆಯ ಆಯ್ಕೆಗಳಾಗುತ್ತವೆ – ಸಂಧಾನ, ಸಂಘರ್ಷ, ಸಮರ.....!

ಈಶ್ವರೀಯ ಸಾಕ್ಷಾತ್ಕಾರಕ್ಕಾಗಿ ಸಾಧನೆಯ ಬಲ ಬೇಕು.....
ಕರ್ಮಬಂಧನ ಸವೆಯದೇ ಸಾಧನೆಯೂ ಸಾಧ್ಯವಾಗದು.....!

ಆದರ್ಶದ ಹಂಬಲ.....
ವಾಸ್ತವಿಕತೆಯ ಅನಿವಾರ್ಯ ಸ್ಥಿತಿ.....
ಇವೆರಡರ ಮಧ್ಯೆ ಲಾಗಾಯ್ತಿನಿಂದಲೂ.....
ಹೊಯ್ದಾಡುತ್ತಲೇ ಬಂದಿದೆ, ಭಾರತೀಯ ಸಮಾಜ.....!

ವಿವಾಹವಿಲ್ಲ, ಕುಟುಂಬವಿಲ್ಲ.....
ಹೆಂಡಿರು ಮಕ್ಕಳ ಸುಖವಿಲ್ಲ.....
ಆದರೂ ಅನುಭವಿಸಬೇಕಾಯಿತು.....
ಕುರು ಪಿತಾಮಹ–ವೇದನೆ, ಯಾತನೆ.....!

ಪ್ರತಿಷ್ಠಿತ ರಾಜಮನೆತನದ.....
ಗಣ್ಯ ಮಹಿಳೆಯರು – ಆದರೇನಂತೆ.....
ಅವರಿಗೂ ತಪ್ಪಲಿಲ್ಲ – ಕ್ಲೇಶ, ದುಃಖ, ಸಂಕಟ.....!

ಯುದ್ಧದಲ್ಲಿ ಗಳಿಸಿದ ಜಯ, ನಿಜವಾದ ಜಯವಲ್ಲ.....
ಪ್ರಾಯಶ್ಚಿತಕ್ಕಾಗಿ ಮಾಡಿಸಿದ, ಯಾಗದಿಂದಲೂ ನೆಮ್ಮದಿಯಿಲ್ಲ.....!

ಭಗವಂತನಿಗೂ ವಿನಾಯಿತಿಯಿಲ್ಲ – ಲೌಕಿಕ ನಿಯಮಗಳಿಂದ.....
ಸಾವಾಯಿತು – ಕ್ರೂರ ಬೇಡನ ಬಾಣಗಳಿಂದ.....!

ಇಂತು, ಉತ್ತರ ಕಾಣಲಾಗದ ಪ್ರಶ್ನೆಗಳಿಂದ.....
ಬಗೆಹರಿಯಲಾಗದ ಸಂದಿಗ್ಧಗಳಿಂದ.....
ಅಂತ್ಯಗೊಳ್ಳುತ್ತದೆ, ಭರತವರ್ಷದ.....
ಮಹಾನ್ ಕಾವ್ಯ, ಮಹಾಭಾರತ.....

**ಎಚ್. ಮಲ್ಲಿಕಾರ್ಜುನ ರಾವ್, ಕಾಪು**
**ಜಂಗಮವಾಣಿ : 9945885088**



ಶ್ರೀ ಬೈಲಕೆರೆ ಜನಾರ್ದನ ರಾವ್ ಅವರ ಪತ್ನಿ ಶ್ರೀಮತಿ ಸಾಧನಾ ಜೆ. ರಾವ್ (71 ವರ್ಷ) ಅವರು ತಾ.04.09.2023ರಂದು ಬೆಂಗಳೂರಿನಲ್ಲಿ ನಿಧನರಾದರು. ಅವರು ಪತಿ ಮತ್ತು ಇಬ್ಬರು ಪುತ್ರರನ್ನು ಅಗಲಿದ್ದಾರೆ.

★★★★ ★★★★



ಪೆರುವಾಜೆ ಶ್ರೀ ರಾಮಚಂದ್ರ ರಾವ್ ಅವರು ತಾ.29.08.2023ರಂದು ನಿಧನರಾದರು.

★★★★ ★★★★

ಕೇದಿಗೆ ಕುಟುಂಬ ಶ್ರೀ ಉದಯ ಕುಮಾರ್ ಕೆ. (ಕೀರ್ತಿಶೇಷ ಶೇರಬೆಟ್ಟು ಕೆ. ಶಂಕರರಾಯರ ದ್ವಿತೀಯ ಪುತ್ರ) ಅವರು ತಾ.30.08.2023ರಂದು ಸ್ವಗೃಹದಲ್ಲಿ ನಿಧನರಾದರು. ಅವರು ಪತ್ನಿ ಹಾಗೂ ಒಬ್ಬ ಪುತ್ರನನ್ನು ಅಗಲಿದ್ದಾರೆ.

## ಮೂಡಬಿದ್ರೆಯ ಸ್ಥಾನಿಕ ಬಂಧುಗಳ "ಸೋಣಡೊಂಜಿ ದಿನ"



ಇತ್ತೀಚೆಗೆ ಅತ್ಯಂತ ವಿಜೃಂಭಣೆಯಿಂದ ನಡೆದ ಈ ಕಾರ್ಯಕ್ರಮ ಮತ್ತೆ ನನಗೆ ಬೆಳ್ತಂಗಡಿಯ ಸಮಾವೇಶವನ್ನು ನೆನಪು ಮಾಡಿತು, ಶ್ರೀಯುತ ದೇವಾನಂದ್ ಭಟ್ಟರ ಅಧ್ಯಕ್ಷತೆಯಲ್ಲಿ ಮೂಡಿ ಬಂದ ಈ ಕಾರ್ಯಕ್ರಮ ತುಂಬಾ ಚೆನ್ನಾಗಿತ್ತು, ಬೆಳಿಗ್ಗೆ 08 ಘಂಟೆಯಿಂದ ನಮ್ಮ ಬಂಧುಗಳ ಅಭಿನಯದ ಯಕ್ಷಗಾನ, ತದನಂತರದ ಸಭಾ ಕಾರ್ಯಕ್ರಮದಲ್ಲಿ ಶ್ರೀಮತಿ ಸವಿತಾ ಎರ್ಮಾಳ್ ಇವರ "ಸಂಬಂಧಗಳ ಮೌಲ್ಯ ಅಂದು-ಇಂದು-ಮುಂದು" ಈ ವಿಷಯಕ್ಕೆ ಸಂಬಂಧಿಸಿದ ವಿಶೇಷ ಉಪನ್ಯಾಸ ತುಂಬಾ ಚೆನ್ನಾಗಿ ಮೂಡಿ ಬಂದಿತು, ನಂತರ ಮೂಡಿ ಬಂದ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ವೈವಿಧ್ಯ ಖಾದ್ಯಗಳ ಭೋಜನ ಎಲ್ಲವೂ ಚೆನ್ನಾಗಿತ್ತು. ಒಟ್ಟಿನಲ್ಲಿ ಒಂದು ಒಳ್ಳೆಯ ಕಾರ್ಯಕ್ರಮ ನಡೆಸಿದ ಸ್ಥಾನಿಕ ಮಹಾಮಂಡಲದ ಮತ್ತು ಮೂಡಬಿದ್ರೆಯ ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ (ರಿ.) ಇದರ ಅಧ್ಯಕ್ಷರಾಗಿರುವ ಶ್ರೀಯುತ ದೇವಾನಂದ್ ಭಟ್‌ರವರಿಗೆ ಶ್ರೀ ಬಿಂಧುಮಾಧವ ಸ್ಥಾನಿಕ ಶಿವ ಬ್ರಾಹ್ಮಣರ ಸಂಘ ಕಳಸ, ಇವರ ಹೃದಯ ಪೂರ್ವಕ ಅಭಿನಂದನೆಗಳು.

## ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ,(ರಿ) ಬೆಳ್ತಂಗಡಿ

**ಶ್ರೀ ವರಮಹಾಲಕ್ಷ್ಮೀ ಪೂಜೆ :** ದಿನಾಂಕ 25-08-2023 ರಂದು ಅಪರಾಹ್ನ ಗಂಟೆ 3-00 ರಿಂದ ಬೆಳ್ತಂಗಡಿ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾದ ಸಭಾಭವನದಲ್ಲಿ 17 ನೇ ವರ್ಷದ ಶ್ರೀ ವರಮಹಾಲಕ್ಷ್ಮಿ ಪೂಜೆಯು ನೆರವೇರಿತು. ಸಭಾದ ಮಹಿಳಾ ವೇದಿಕೆಯ ನೇತೃತ್ವದಲ್ಲಿ ನಡೆದ ಪೂಜಾಕಾರ್ಯಕ್ರಮದಲ್ಲಿ 18 ಸುಮಂಗಲಿಯರು ವೃತಧಾರಿಗಳಾಗಿ ಭಾಗವಹಿಸಿದರು. ಸುಮಾರು 65ಕ್ಕಿಂತಲೂ ಹೆಚ್ಚು ಸಮಾಜ ಬಾಂಧವರು ಭಾಗವಹಿಸಿದ್ದರು. ಮಹಿಳಾ ವೇದಿಕೆ ಅಧ್ಯಕ್ಷರಾದ ಶ್ರೀಮತಿ ಸ್ವಾತಿ ವಿಶ್ವಜಿತ್ ಹಾಗೂ ಕಾರ್ಯದರ್ಶಿ ಶ್ರೀಮತಿ ಸವಿತಾ ಮನೋಹರ್‌ರವರ ಮುಂದಾಳುತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಭಾದ ಅಧ್ಯಕ್ಷ ಶ್ರೀ ಶಿವಾನಂದ ರಾವ್, ಕಾರ್ಯದರ್ಶಿ ಶ್ರೀ ವಿಕಾಸ್ ರಾವ್ ಹಾಗೂಸದಸ್ಯರು ಭಾಗವಹಿಸಿದ್ದರು.

**ಸೌರ ಋುಗುಪಾಕರ್ಮ** : ದಿನಾಂಕ 29-08-2023 ರಂದು ಬೆಳ್ತಂಗಡಿ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾದ ಆಶ್ರಯದಲ್ಲಿ ಪ್ರಾತಃ ಕಾಲ 6-00 ಗಂಟೆಯಿಂದ ಉಪಾಕರ್ಮ ಹೋಮದೊಂದಿಗೆ ಸೌರ ಋುಗುಪಾಕರ್ಮ ನಡೆಯಿತು. ಸಮಾಜದ 40 ಸದಸ್ಯರು ಭಾಗವಹಿಸಿ ನೂತನ ಯಜ್ಞೋಪವೀತ ಧಾರಣೆ ಮಾಡಿರುತ್ತಾರೆ. ಉಪಾಹಾರದ ಪ್ರಾಯೋಜಕತ್ವವನ್ನು ಶ್ರೀ ಬಿ.ಕೆ ಧನಂಜಯ ರಾವ್ ವಹಿಸಿರುತ್ತಾರೆ.

## ಆಲಂಪಾಡಿ ವೆಂಕಟೇಶ ಶಾನುಭಾಗ್ ಟ್ರಸ್ಟ್, ಕಾಸರಗೋಡು : ಸನ್ಮಾನ



ಆಲಂಪಾಡಿ ವೆಂಕಟೇಶ ಶಾನುಭಾಗ್ ಟ್ರಸ್ಟ್, ಕಾಸರಗೋಡು ಇದರ ವತಿಯಿಂದ ಅದರ ಭಾರವಾಹಿಗಳಾದ ಡಾ. ಶಂಕರ್ ರಾಜ್, ಶ್ರೀ ಸುಕುಮಾರ ಆಲಂಪಾಡಿ, ವಿದುಷಿ ಶ್ರೀಮತಿ ರಾಧಾಮುರಳೀಧರ ಹಾಗೂ ಶ್ರೀಮತಿ ನಯನಾ ರಾಜ್ ಅವರು ಶತಾಯುಷಿ ಮೃದಂಗ ವಿದ್ವಾನ್ ಶ್ರೀ ಬಾಬು ರೈಯವರನ್ನು ಅವರ ಸ್ವಗೃಹದಲ್ಲಿ ಫಲ ತಾಂಬೂಲಗಳನ್ನು ನೀಡಿ ಶಾಲು ಹೊದಿಸಿ ಸನ್ಮಾನಿಸಿ ಗೌರವಿಸಿದರು.

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಸುರತ್ಕಲ್ : ಆಟಿದೊ ಆಟ-ಕೂಟ



ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಸುರತ್ಕಲ್, ಇದರ ಮಹಿಳಾ ವೇದಿಕೆಯವರು ನಡೆಸಿಕೊಟ್ಟ ಆಟಿದೊ ಆಟ-ಕೂಟವು ದಿನಾಂಕ 30.07.2023ನೇ ರವಿವಾರ ಮಲ್ಲಮಾರು ಶ್ರೀ ಭವಾನಿಶಂಕರ ರಾಯರ ಮನೆಯಲ್ಲಿ ಸಂಭ್ರಮದಿಂದ ನಡೆಯಿತು.

ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಪರಿಮಳ ಪ್ರಶಾಂತ್‌ರವರು ಸಂಘದ ಎಲ್ಲಾ ಪದಾಧಿಕಾರಿಗಳನ್ನು ಕಾರ್ಯಕ್ರಮಕ್ಕೆ ಪ್ರೀತಿಯಿಂದ ಆಹ್ವಾನಿಸಿ, ಕುಮಾರಿ ಸಂಜನಾರವರು ಸುಮಧುರವಾಗಿ ಪ್ರಾರ್ಥಿಸಿ, ಗಣ್ಯರೆಲ್ಲರೂ ಸೇರಿ ದೀಪ ಪ್ರಜ್ವಲನ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಶುಭಚಾಲನೆ ನೀಡಿದರು.

ಶ್ರೀಮತಿ ಕ್ಷಮಾ ಹರಿನಾರಾಯಣ ರವರು, ಆಟಿಯ ವಿಶೇಷತೆಯನ್ನು ಮನಮುಟ್ಟುವಂತೆ ತಿಳಿಸಿ, ಆಟಿದೊ ರಸಪ್ರಶ್ನೆ ಕಾರ್ಯಕ್ರಮವನ್ನು ಮನಮೋಹಕವಾಗಿ ನೆರವೇರಿಸಿಕೊಟ್ಟರು. ಆಟಿದೊ ಆಟ-ಕೂಟವು ಸಂಘದ ಸದಸ್ಯರೆಲ್ಲರ ಮನೋರಂಜನೆಗಾಗಿಯೇ ಆಯೋಜಿಸಲ್ಪಟ್ಟದ್ದರಿಂದ, ಸುಮಾರು 3 ಗಂಟೆಗಳ ಕಾಲ, ವಯೋಮಾನಕ್ಕನುಗುಣವಾಗಿ, ನವನವೀನ ಆಟಗಳು ಶ್ರೀಮತಿ ಸುಧಾ ಪಾಲಚಂದ್ರರವರ ನೇತ್ರತ್ವದಲ್ಲಿ, ಸಂಘದ ಎಲ್ಲಾ ಸದಸ್ಯರ ಭಾಗವಹಿಸುವಿಕೆಯೊಂದಿಗೆ ನೆರವೇರಿತು.

ಬಳಿಕ ನಡೆದ ಸಭಾ ಕಾರ್ಯಕ್ರಮವು, ಸಂಘದ ಗೌರವ ಅಧ್ಯಕ್ಷರಾದ ಶ್ರೀ ಭವಾನಿಶಂಕರ ರಾವ್, ಅಧ್ಯಕ್ಷರಾದ, ಶ್ರೀ ಮಾಧವ ರಾವ್, ಉಪಾಧ್ಯಕ್ಷರಾದ ಶ್ರೀ ವಾಸುದೇವ ಶಾನುಭೋಗ್‌ಗೂ ಶ್ರೀ ಗೋಪಾಲಕೃಷ್ಣ ರಾವ್, ಕಾರ್ಯದರ್ಶಿ ಶ್ರೀ ಪಾಲಚಂದ್ರ ಶರ್ಮಾ, ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಪರಿಮಳ ಪ್ರಶಾಂತ್, ಉಪಾಧ್ಯಕ್ಷರಾದ ಶ್ರೀಮತಿ ವೀಣಾ ಅರವಿಂದ್, ಕಾರ್ಯದರ್ಶಿ ಶ್ರೀಮತಿ ಶರಣ್ಯ ರಾಧಾಕೃಷ್ಣ ಹಾಗೂ ಯುವೇದಿಕೆಯ ಕಾರ್ಯದರ್ಶಿ ಶ್ರೀ ಅಶ್ವಿನ್‌ರವರ ಉಪಸ್ಥಿತಿಯಲ್ಲಿ, ಶ್ರೀಮತಿ ಸುನೀತಾ ಶ್ರೀಕಾಂತ್ ರಾವ್‌ರವರ ಕಾರ್ಯಕ್ರಮ ನಿರೂಪಣೆಯೊಂದಿಗೆ ಸುಂದರವಾಗಿ ಮೂಡಿಬಂದಿತು. ಆಟೋಟಗಳಲ್ಲಿ ವಿಜೇತರಾದವರೆಲ್ಲರಿಗೂ ಸಭಾಸದರು ಬಹುಮಾನ ನೀಡಿ ಪ್ರೋತ್ಸಾಹಿಸಿದರು. ಅಧ್ಯಕ್ಷರಾದ ಮಾಧವ ರಾವ್‌ರವರು, ಸದಸ್ಯರೆಲ್ಲರೂ ಒಟ್ಟಾಗುವ ಇಂತಹ ಕಾರ್ಯಕ್ರಮಗಳು ಎಲ್ಲರ ಸಹಕಾರದಿಂದ ಮತ್ತಷ್ಟು ನೆರವೇರಲಿಯೆಂದು ಹಾರೈಸಿದರು ಮತ್ತು ಕಾರ್ಯಕ್ರಮದ ಆಯೋಜನೆಗಾಗಿ ಮಹಿಳಾ ವೇದಿಕೆಯ ಎಲ್ಲಾ ಪದಾಧಿಕಾರಿಗಳನ್ನು ಶ್ಲಾಘಿಸಿದರು. ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಪರಿಮಳ ಪ್ರಶಾಂತ್‌ರವರು ಧನ್ಯವಾದ ಸಮರ್ಪಿಸಿ, ಶ್ರೀ ಪ್ರವೀಣ್ ಮಲ್ಲಮಾರು ತಂಡದವರಿಂದ ತಯಾರಿಸಲ್ಪಟ್ಟ ಆಟಿಯ ವಿಶೇಷ ಖಾದ್ಯಗಳನ್ನು ನೆರೆದವರೆಲ್ಲರೂ ಸವಿಯುವುದರೊಂದಿಗೆ, ಕಾರ್ಯಕ್ರಮವು ಸಂಪನ್ನವಾಯಿತು.

## ಉಡುಪಿ ಶ್ರೀ ಶಾರದಾ ಮಂಟಪದಲ್ಲಿ ಋುಗುಪಾಕರ್ಮ





ದಿ.29-08-2023ರಂದು ಶ್ರೀ ಶಾರದಾ ಮಂಟಪದಲ್ಲಿ ಉಡುಪಿಯ ಸಮಾಜಬಾಂಧವರ ಉಪಾಕರ್ಮವು ಜರಗಿತು. ಶ್ರೀ ಕೃಷ್ಣಭಟ್ ಹಾಗೂ ಶ್ರೀ ಅರವಿಂದ ಶರ್ಮ ಇವರು ಋುತ್ವಿಜರಾಗಿದ್ದು, ಶ್ರೀ ನಟರಾಜರವರು ಕರ್ತೃರಾಗಿ ಸಹಕರಿಸಿದ್ದರು. 8 ಮಂದಿ ನೂತನ ವಟುಗಳು ಭಾಗವಹಿಸಿದ್ದರು.








**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

ಫೋನ್ : 2556536 (R), 2555466 (O), Mobile : 9845149521

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ.: ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

## ನೂತನ ವಧೂವರರಿಗೆ ಅಭಿನಂದನೆಗಳು



### ಚಿ| ನಿರಂಜನ ಹಾಗೂ ಚಿ| ಸೌ| ವರ್ಷಿಣಿ ಎಸ್.

ಕೀರ್ತಿಶೇಷ ಯು.ರುದ್ರಯ್ಯನವರ ಪೌತ್ರ ಹಾಗೂ ಶ್ರೀಮತಿ ಸರೋಜ ಮತ್ತು ಶ್ರೀ ಆರ್. ಕಮಲಾಕರ ಇವರ ಪುತ್ರ ಚಿ| ನಿರಂಜನ ಇವರ ವಿವಾಹವು ಶ್ರೀಮತಿ ಹರಿಣಿ ಮತ್ತು ಶ್ರೀಕಾಂತ್‌ರವರ ಪುತ್ರಿ ಚಿ| ಸೌ| ವರ್ಷಿಣಿಯೊಂದಿಗೆ ತಾ.17.05.2023ರಂದು ಮಂಗಳೂರು ತಲಪಾಡಿ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಬಳಿಯ "ಶ್ರೀ ದುರ್ಗಾ ಧ್ಯಾನಮಂದಿರ"ದಲ್ಲಿ ಜರಗಿತು.

**ನೂತನ ವಧೂವರರಿಗೆ ಶುಭ ಕೋರುವ**

| | |
|---|---|
| ಶ್ರೀಮತಿ ಹರಿಣಿ ಮತ್ತು ಶ್ರೀಕಾಂತ್ | ಶ್ರೀಮತಿ ಅನುಸೂಯಮ್ಮ ರುದ್ರಯ್ಯ |
| ಶ್ರೀಮತಿ ಜಯಶ್ರೀ ಮತ್ತು ಶ್ರೀಧರ್ | ಶ್ರೀಮತಿ ಗಾಯತ್ರಿ ಮತ್ತು ಶ್ರೀ ರಾಜಶೇಖರ ರಾವ್ |
| ಶ್ರೀಮತಿ ಸುನೀತಾ ಮತ್ತು ಶ್ರೀ ವಾಸುದೇವನ್ | ಶ್ರೀಮತಿ ರೇಖಾ ಮತ್ತು ಶ್ರೀ ಲಕ್ಷ್ಮೀಕಾಂತ |
| ಶ್ರೀಮತಿ ಪದ್ಮಾವತಿ ಮತ್ತು ಶ್ರೀ ಆನಂದ್ | ಶ್ರೀಮತಿ ಸರೋಜ ಮತ್ತು ಶ್ರೀ ಕಮಲಾಕರ |
| ಶ್ರೀಮತಿ ಸುಶಿಲಾ ಸದಾಶಿವ ರಾವ್ | ಕುಮಾರಿ ಯು. ನಿಶ್ಚಿಂತ |
| ಶ್ರೀಮತಿ ಸಂಧ್ಯಾ ಮತ್ತು ಶ್ರೀ ರಾಮಚಂದ್ರ ರಾವ್ | ಶ್ರೀಮತಿ ತಾರಾ ಮತ್ತು ಶ್ರೀ ಪ್ರಭಾಕರ ರಾವ್, ಮಾರ್ಪಳ್ಳಿ |

## ಶ್ರೀ ಶಿವಪ್ರಸಾದ್ ರಾವ್ ಇವರಿಗೆ ಸನ್ಮಾನ



ಶ್ರೀ ಜ್ಞಾನಶಕ್ತಿ ಕುಣಿತ ಭಜನಾ ಬಳಗದ ಸದಸ್ಯರಾದ ಶ್ರೀ ಶಿವಪ್ರಸಾದ್ ರಾವ್ ಇವರು ಇತ್ತೀಚೆಗೆ ಚಾರ್ಟೆಡ್ ಅಕೌಂಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಇವರನ್ನು ದಿನಾಂಕ 05.08.2023ರಂದು ಬಾರಕೂರು ಶ್ರೀಮತಿ ಚಂದ್ರಿಕಾ ರವೀಂದ್ರ ರಾವ್ ಇವರ ಮನೆಯಲ್ಲಿ ಶ್ರೀ ಜ್ಞಾನಶಕ್ತಿ ಕುಣಿತ ಭಜನಾ ಬಳಗ ಬ್ರಹ್ಮಾವರ ವಲಯದ ವತಿಯಿಂದ ಗೌರವಿಸಿ ಸನ್ಮಾನಿಸಲಾಯಿತು. ಇವರು ಬಾರಕೂರು ಅಪ್ಸರಾ ಶ್ರೀ ಸತೀಶ್ ರಾವ್ ಕೂಡ್ಲಿ ಇವರ ಸುಪುತ್ರರಾಗಿರುತ್ತಾರೆ. ಈ ಸಂದರ್ಭದಲ್ಲಿ ಶ್ರೀ ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಂಘ ಬ್ರಹ್ಮಾವರ ವಲಯದ ಅಧ್ಯಕ್ಷರಾದ ಶ್ರೀ ಮಂಜುನಾಥ ರಾವ್ ಕೋಟೆಕೆರೆ, ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ಸವಿತಾ ಕುಮಾರಸ್ವಾಮಿ, ಖಜಾಂಚಿಗಳಾದ ಭಾಸ್ಕರ ಹೆಬ್ಬಾರ್ ಹಾಗೂ ಸರ್ವ ಸದಸ್ಯರು, ಕುಣಿತ ಭಜನಾ ಗುರುಗಳಾದ ಶ್ರೀ ರಾಘವೇಂದ್ರ ರಾವ್ ಮಸ್ಕೆಬೈಲು ಉಪಸ್ಥಿತರಿದ್ದರು.



ಉಡುಪಿ ದೊಡ್ಡಣಗುಡ್ಡೆ ಕರಂಬಳ್ಳಿಯ ಬ್ರಾಹ್ಮೀ ಸಭಾಗ್ರಹದಲ್ಲಿ ಉಡುಪಿ ಜಿಲ್ಲಾ ಯುವ ಬ್ರಾಹ್ಮಣ ಪರಿಷತ್ ವತಿಯಿಂದ ಸ್ವಾತಂತ್ರ್ಯ ದಿನಾಚರಣೆಯಂದು ಮುಖ್ಯ ಅತಿಥಿಯಾಗಿ ಕೆ. ಸುರೇಶ ರಾವ್ ಕುತ್ಪಾಡಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

## ನಮ್ಮ ಸಾಧಕರು



### ಗುರುರಾಜ್ ರಾವ್ ಆರೂರು

ನಮ್ಮ ಸಮಾಜದ ಗುರುರಾಜ್ ರಾವ್ ಇವರು ಆರೂರು ಗ್ರಾಮ ಪಂಚಾಯಿತಿನ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿರುತ್ತಾರೆ. ಇವರಿಗೆ ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ಪರವಾಗಿ ಹೃದಯ ಪೂರ್ವಕ ಅಭಿನಂದನೆಗಳು.




### ಲಕ್ಷ್ಮೀನಾರಾಯಣ ಶರ್ಮ

ನಮ್ಮ ಸಮಾಜದ ಲಕ್ಷ್ಮೀನಾರಾಯಣ ಶರ್ಮ ಅತಿಕಾರ ಬೈಲು ಇವರು ಕಾವಳ ಪಡೂರು ಗ್ರಾಮ ಪಂಚಾಯಿತಿನ ಅಧ್ಯಕ್ಷರಾಗಿ ಬಹುಮತದಿಂದ ಆಯ್ಕೆಯಾಗಿರುತ್ತಾರೆ. ಇವರಿಗೆ ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ಪರವಾಗಿ ಹೃದಯ ಪೂರ್ವಕ ಅಭಿನಂದನೆಗಳು.



### ರವಿರಾಜ್ ರಾವ್ ಎಲ್ಲೂರು

ನಮ್ಮ ಸಮಾಜದ ರವಿರಾಜ್ ರಾವ್ ಇವರು ಎಲ್ಲೂರು ಗ್ರಾಮ ಪಂಚಾಯಿತಿನ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿರುತ್ತಾರೆ. ಇವರಿಗೆ ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ಪರವಾಗಿ ಹೃದಯ ಪೂರ್ವಕ ಅಭಿನಂದನೆಗಳು.



## ಶ್ರೀ ಶಾರದಾ ಮಂದಿರದಲ್ಲಿ ಹೂವಿನ ಪೂಜೆ

ದಿನಾಂಕ 01.09.2023ರ ಶುಕ್ರವಾರ, ಮಹಿಳಾ ವೇದಿಕೆ ಸಹಕಾರದೊಂದಿಗೆ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ವತಿಯಿಂದ ಲಲಿತಾ ಸಹಸ್ರನಾಮ ಪಾರಾಯಣ, ಲಲಿತಾ ಅಷ್ಟೋತ್ತರ, ಕುಂಕುಮಾರ್ಚನೆ, ಶಂಕರ ಭಜನೆಯೊಂದಿಗೆ ಶ್ರೀ ಶಾರದಾ ಮಂದಿರದಲ್ಲಿ ಶ್ರೀ ಶಾರದಾ ದೇವಿಗೆ ಮಲ್ಲಿಗೆಯ ಅಲಂಕಾರದೊಂದಿಗೆ ಹೂವಿನ ಪೂಜೆ ನೆರವೇರಿತು.

## ಉಡುಪಿ ಶ್ರೀ ಶಾರದಾ ಮಂದಿರದಲ್ಲಿ ನಾಗರಪಂಚಮಿ



ತಾ.21.08.2023 ರಂದು ನಾಗರ ಪಂಚಮಿಯನ್ನು ಶ್ರೀ ಶಾರದಾ ಮಂಟಪದ ವಠಾರದಲ್ಲಿರುವ ನಾಗಬನದಲ್ಲಿ ಆಚರಿಸಲಾಯಿತು. ಆ ದಿನ ನಾಗದೇವರ ಶಿಲಾ ವಿಗ್ರಹಕ್ಕೆ, ಕ್ಷೀರ, ಪಂಚಾಮೃತ, ನಾರಿಕೇಳದಿಂದ ಅಭಿಷೇಕ ಮಾಡಲಾಯಿತು. ತದನಂತರ ದೇವಸ್ಥಾನದ ಅರ್ಚಕರಾದ ಶ್ರೀಪಾದ ಭಟ್ ಮಹಾಮಂಗಳಾರತಿ ನೆರವೇರಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಂಜುನಾಥ ಹೆಬ್ಬಾರ್, ಕಾರ್ಯದರ್ಶಿ, ಜೊತೆ ಕಾರ್ಯದರ್ಶಿ ಮತ್ತು ಸಂಘದ ನಿರ್ದೇಶಕರು, ಸಮಾಜಬಾಂಧವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ಇತ್ತೀಚೆಗೆ ನಡೆದ ಶ್ರೀ ಶಂಕರ ಪ್ರತಿಷ್ಠಾನ ರಿ. ಕಾರ್ಕಳ, ಇದರ ವಾರ್ಷಿಕೋತ್ಸವ ಹಾಗೂ ಮಹಾಸಭೆಯ ಕಾರ್ಯಕ್ರಮದದಲ್ಲಿ ಹಿರಿಯ ದಂಪತಿಗಳಾದ ಶ್ರೀ ಐ.ಕೆ. ಕೃತ್ತಿವಾಸ ಶರ್ಮ ಮತ್ತು ಶ್ರೀಮತಿ ಐ.ಕೆ. ಪ್ರಭಾವತಿಯವರನ್ನು ಗೌರವಿಸಲಾಯಿತು.

## ಕುಮಾರಿ ಪಗತಿ ಭಂಡಿ, ಪೆರ್ಡೂರು : ಸ್ನಾತಕೋತ್ತರ ಪದವಿ



ರವೀಂದ್ರ ಭಂಡಿ ಮತ್ತು ವಾಣಿ ಭಂಡಿ ಪೆರ್ಡೂರು ಇವರ ಪುತ್ರಿ ಪ್ರಗತಿ ಭಂಡಿ ಇವರು ಆಸ್ಟನ್ ವಿಶ್ವವಿದ್ಯಾಲಯ ಯುನೈಟೆಡ್ ಕಿಂಗ್ಡಮ್ (Aston University, United Kingdom) ನಲ್ಲಿ ಎಮ್.ಬಿ.ಎ. (MBA) ಪದವಿಯನ್ನು ಪಡೆದಿರುತ್ತಾರೆ. ಪ್ರಸ್ತುತ Crowd Strike Company U.K.ಯಲ್ಲಿ Technical Account Manager ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಸಾಧನೆಗಾಗಿ ಅವರಿಗೆ ಹಾಗೂ ಅವರ ಪೋಷಕರಿಗೆ ಅಭಿನಂದನೆಗಳು.




Welcome to Kanasu The Resort

Escape to Kanasu for an unforgettable nature retreat.
Enjoy rustic pine cottages, warm hospitality, and local culinary delights.
Reconnect with family amidst nature's beauty.

Key Features & Amenities

- 6 Cottages
- 1 Farm House
- AC Rooms
- Swimming Pool
- Free Wifi
- Free Parking
- Free Breakfast
- Goushala
- Dhaba Style Restaurant
- All Kinds of Events

List of Games and Activities:
- Carom, Chess
- Jenga, Dart
- Fussball
- Mini Golf
- Basketball
- Trampoline
- Cricket
- Mini Football
- Badminton

For More Information

+91 90191 26470 www.kanasuresort.com Kukkehalli, Udupi - 576124

# ನಮನ ಸೌಹಾರ್ದ ಸಹಕಾರಿ ಸಂಘ ನಿ. – ಉದ್ಘಾಟನೆ




ಅಧ್ಯಕ್ಷರು


ಉಪಾಧ್ಯಕ್ಷರು

ಮೂಡಬಿದ್ರಿಯಲ್ಲಿ ನೂತನವಾಗಿ ಆರಂಭಗೊಂಡ ನಮನ ಸೌಹಾರ್ದ ಸಹಕಾರಿ ಸಂಘ ನಿ. (ಬ್ಯಾಂಕ್) ಇದರ ಅಧ್ಯಕ್ಷರಾಗಿ ಶ್ರೀ ಚಂದ್ರಶೇಖರ ರಾವ್ ಬೊಕ್ಕಸ (ಕರ್ಣಾಟಕ ಬ್ಯಾಂಕ್ ನಿವೃತ್ತ ಜಿ.ಎಂ.) ಹಾಗೂ ಉಪಾಧ್ಯಕ್ಷರಾಗಿ ಮುಖ್ಯ ಪ್ರವರ್ತಕ ಬೆಳ್ವಾಯಿ ಎಂ. ದೇವಾನಂದ ಭಟ್ (ಅಧ್ಯಕ್ಷರು ಸ್ಥಾನಿಕ ಬ್ರಾಹ್ಮಣ ಮಹಾ ಮಂಡಲ) ಆಯ್ಕೆಗೊಂಡಿರುತ್ತಾರೆ. ಮೂಡಬಿದ್ರಿಯ ಉದ್ಯಮಿ ಕೆ. ಶ್ರೀಪತಿ ಭಟ್ ಗೌರವ ಸಲಹೆಗಾರರಾಗಿ, ಒಟ್ಟು ಪ್ರತಿಷ್ಠಿತ 13 ಜನ ನಿರ್ದೇಶಕರಲ್ಲಿ ಕಾರ್ಪ್ ಬ್ಯಾಂಕ್ ನಿವೃತ್ತ ಡಿ.ಜಿ.ಎಂ. ವಸಂತ ಭಟ್ ಪಯ್ಯಡೇ, ವಜ್ರದ ಉದ್ಯಮಿ ನಿತ್ಯಾನಂದ ಮಠ, ಆಳ್ವಾಸ್‌ನ ಡಾ। ಸುಬ್ರಹ್ಮಣ್ಯ ಪದ್ಯಾಣ, ವಿದ್ಯಾ ರಮೇಶ್ ಭಟ್ ಪುತ್ತಿಗೆ, ಕೆ.ಎಸ್. ಕೇಶವ ರಾವ್ ಕಾರ್ಕಳ, ಅಲಕಾ ಬಿ, ಸುಬ್ರಹ್ಮಣ್ಯ ಭಟ್ ಏರ್ಪಲೆ, ವಾಸುದೇವ ಉಪಾಧ್ಯ, ವಸಂತ ಭಟ್ ನಾರಾವಿ, ರಾಘವೇಂದ್ರ ಹೆಬ್ಬಾರ್ ಕಬ್ಬಿನಾಲೆ, ರಘುಪತಿ ಭಟ್ ಗುಂಡಿಯಡ್ಕ ಆಯ್ಕೆ ಆಗಿದ್ದಾರೆ.

ಹೊರನಾಡು ಕ್ಷೇತ್ರದ ಧರ್ಮಕರ್ತರಾದ ಶ್ರೀ ಜಿ. ಭೀಮೇಶ್ವರ ಜೋಶಿ ಉದ್ಘಾಟನೆ ನೆರವೇರಿಸಿದ ವೇದಿಕೆಯಲ್ಲಿ ಮೂಡಬಿದಿರೆ ಜೈನ ಮಠದ ಪೂಜ್ಯ ಸ್ವಾಮೀಜಿ ಅವರು ಇದು ಮುಂದೆ ಮೂಡಬಿದಿರೆಯಲ್ಲಿ ಉತ್ತರೋತ್ತರ ಅಭಿವೃದ್ಧಿ ಹೊಂದಿ ಒಂದು ಮಾದರಿ ಜನೋಪಕಾರಿ ಸಂಸ್ಥೆಯಾಗಿ ಬೆಳೆಯಲಿ, ಬೆಳಗಲಿ ಎಂದು ಆಶೀರ್ವಚನ ನೀಡಿದರು. ವೇದಿಕೆಯಲ್ಲಿ ಗ್ರಾಮದ ದೇವಸ್ಥಾನ ಪುತ್ತಿಗೆ ಅರ್ಚಕರು ಶ್ರೀ ಅಡಿಗಳ್ ಶ್ರೀ ಅನಂತ ಕೃಷ್ಣ ಭಟ್, ಹನುಮಂತ ದೇವಸ್ಥಾನ ಆಡಳಿತ ಮೊಕ್ತೇಸರರು ಶ್ರೀ ಜಿ. ಉಮೇಶ್ ಪೈ, ಜಿಲ್ಲಾ ಸೌಹಾರ್ದ ಒಕ್ಕೂಟದ ಅಧ್ಯಕ್ಷರು ಲ। ಎ. ಸುರೇಶ್ ರೈ ಉಪಸ್ಥಿತರಿದ್ದರು. ಅಧ್ಯಕ್ಷ ಸ್ಥಾನದಿಂದ ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು ಸೌಹಾರ್ದ ಸಹಕಾರಿಗೆ ಶುಭಹಾರೈಸಿದರು.



SUMIRASA - Full Villa in Udupi for Stay

WHAT THIS PLACE OFFERS

- GARDEN VIEW
- BATHROOM
  Cleaning products, Bidet, Hot water
- BEDROOM AND LAUNDRY
  Free washing machine
- ESSENTIALS
  Towels, bed sheets, soap, Hangers
- BED LINEN
  Cotton linen
- CLOTHES DRYING RACK
- CLOTHES STORAGE: Wardrobe and drawers
- ENTERTAINMENT
  TV and Books and reading material
- HEATING AND COOLING
  AC – split-type ductless system, Ceiling fan
- INTERNET AND OFFICE
  Wifi
- KITCHEN AND DINING
  Kitchen Space where guests can cook
- REFRIGERATOR
- COOKING BASICS
- DISHES AND SILVERWARE



Relax with the whole family at this peaceful place to stay with all major attractions at a short distance. Enjoy the sea waves at Malpe beach within 5KM drive. Seak blessing at the famous Srikrishna Temple and Anantheshwara Temple which is just 2KM. Perfect place for hosting wedding guests with major wedding venues and convention halls near by.

For Booking Contact : +91 98220 28537
You can also visit https://www.airbnb.co.in/rooms

With Best Compliments From :

BUILDING DREAMS, ENHANCING LIVES.



NAKSHATRA — GANDHINAGAR —

SOLITAIRE — HATHILL, —

HABITAT ONE 54 An Urban Lifestyle — DEREBAIL —

ANANTESSH — CAR STREET, —

Land® Trades
BUILDERS & DEVELOPERS
BUILDING TRUST, DELIVERING VALUE

MANGALURU'S LEADING REAL ESTATE COMPANY

RESIDENTIAL | COMMERCIAL | PLOTS

For More Details : 8882 777 444 | 0824 2425424, 2423866 | www.landtrades.in

Follow us on :

SHREE SHARADA – Printed and Published by P. Prabhakara Bhandy on behalf of Shree Stanika Brahmana Sangha. Printed at Shrinidhi Graphic Tech, D.No. 8-7A1-12, Ground Floor, Shambhavi Crystal Biz Hub, Near D.C Office, Saralabettu Ward, Herga Village, Dist : UDUPI - 576104, Karnataka. Published at : Shri Stanika Brahmana Sangha, Shri Sharada Mantapa, Sharada Nagara, Kunjibettu, Udupi - 576 102. Editor : U. Aravinda Kumar